ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue:69 ಸಂಚಿಕೆ: 69 | Date:26-03-2026 Thursday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ಏ 1ರಂದು ಸಿದ್ದಗಂಗಾ ಮಠಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ: ಬಿಗಿ ಭದ್ರತೆ

ತುಮಕೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಏ.1ರಂದು ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಲಿದ್ದಾರೆ. ಶ್ರೀ ಶಿವಕುಮಾರ ಸ್ವಾಮೀಜಿಗಳ 119ನೇ ಜನ್ಮದಿನಾಚರಣೆ ಮತ್ತು ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅವರು ಸ್ವಾಮೀಜಿಗಳ ಗದ್ದುಗೆ ದರ್ಶನ ಪಡೆಯಲಿದ್ದು, ಜೊತೆಗೆ 10 ಸಾವಿರ ಮಕ್ಕಳೊಂದಿಗೆ ಸಂವಾದ ನಡೆಸಲಿದ್ದಾರೆ.





ತುಮಕೂರು, ಮಾರ್ಚ್ 21: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮತ್ತೊಮ್ಮೆ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಸಿದ್ದಗಂಗಾ ಮಠದ ಶ್ರೀ ಶಿವಕುಮಾರಸ್ವಾಮೀಜಿ ಅವರ 119ನೇ ಜನ್ಮದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮ ಹಿನ್ನಲೆ ಏಪ್ರಿಲ್ 1ರಂದು ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಲಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಆಗಮನ ಹಿನ್ನಲೆಯಲ್ಲಿ ತುಮಕೂರಿನ ಕ್ಯಾತಸಂದ್ರ ಸಮೀಪದ ಸಿದ್ದಗಂಗಾ ಮಠದಲ್ಲಿ ಇಂದು ಪೂರ್ವಭಾವಿ ಸಭೆ ನಡೆಯಿತು. ಮಠದ ಪೀಠಾಧಿಪತಿ ಸಿದ್ದಲಿಂಗ ಶ್ರೀಗಳ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಕೇಂದ್ರ ಸಚಿವ ವಿ. ಸೋಮಣ್ಣ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ತುಮಕೂರು ಎಸ್ಪಿ ಅಶೋಕ್ ಹಾಗೂ ಶಾಸಕರುಗಳಾದ ಸುರೇಶ್ ಗೌಡ, ಜ್ಯೋತಿ ಗಣೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದು, ರಾಷ್ಟ್ರಪತಿ ಭೇಟಿ ಹಿನ್ನಲೆಯಲ್ಲಿ ಅಗತ್ಯ ಬಂದೋಬಸ್ತ್ ಹಾಗೂ ಇತರೆ ಸಿದ್ಧತೆಗಳ ಕುರಿತು ಚರ್ಚೆ ಮಾಡಲಾಗಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ವೇಳಾ ಪಟ್ಟಿ ಹೀಗಿದೆ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾರ್ಚ್ 31ರಂದು ಬೆಂಗಳೂರಿಗೆ ಆಗಮಿಸಲಿದ್ದು, ಲೋಕಪಾಲ್ ಭವನದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಬಳಿಕ ಏಪ್ರಿಲ್ 1ರಂದು ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಲಿರುವ ಅವರು, ಮಠದ ಪೂಜ್ಯ ಶಿವಕುಮಾರಸ್ವಾಮೀಜಿಗಳ ಗದ್ದುಗೆ ದರ್ಶನ ಪಡೆಯಲಿದ್ದಾರೆ.

ಬಳಿಕ ಮಠದ ಸುಮಾರು 10 ಸಾವಿರ ಮಕ್ಕಳೊಂದಿಗೆ ಸಂವಾದ ನಡೆಸಲಿದ್ದು, ಆ ಬಳಿಕ ಶಿವಕುಮಾರಸ್ವಾಮೀಜಿಗಳ 119ನೇ ಜನ್ಮದಿನಾಚರಣೆ ಅಂಗವಾಗಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಹಿನ್ನಲೆಯಲ್ಲಿ ಕಾರ್ಯಕ್ರಮಕ್ಕೆ ಅಗತ್ಯ ಬಂದೋಬಸ್ತ್ ಹಾಗೂ ಇತರೆ ಸಿದ್ಧತೆಗಳ ಕುರಿತು ಪೂರ್ವಭಾವಿ ಸಭೆಯಲ್ಲಿ ಚರ್ಚೆ ಮಾಡಲಾಗಿದೆ.

## ರಾಜ್ಯದಲ್ಲಿ ಮುಂದಿನ 5 ದಿನಗಳ ಕಾಲ ಮಳೆ:
### ಆಲಿಕಲ್ಲು, ಬಿರುಗಾಳಿ ಸಹಿತ ಗುಡುಗು–ಮಿಂಚು ಬರುವ ಸಾಧ್ಯತೆ

ಕರ್ನಾಟಕದಲ್ಲಿ ಮುಂದಿನ ಐದು ದಿನಗಳ ಕಾಲ ತೀವ್ರ ಪೂರ್ವಮುಂಗಾರು ಮಳೆ ನಿರೀಕ್ಷೆಯಿದೆ. 40–50 ಕಿ.ಮೀ ವೇಗದ ಗಾಳಿ ಹಾಗೂ ಆಲಿಕಲ್ಲು ಮಳೆಯ ಸಾಧ್ಯತೆಯಿದ್ದು, ಹಲವು ಜಿಲ್ಲೆಗಳಿಗೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಬೆಂಗಳೂರು ಸೇರಿದಂತೆ ದಕ್ಷಿಣ ಮತ್ತು ಉತ್ತರ ಒಳನಾಡು, ಮಲೆನಾಡು ಭಾಗಗಳಲ್ಲಿ ಗುಡುಗು ಸಹಿತ ಮಳೆ ಇರಲಿದೆ. ಸಾರ್ವಜನಿಕರು ಮತ್ತು ರೈತರು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ, ಮರಗಳು ಬೀಳುವ ಸಾಧ್ಯತೆಯೂ ಇದೆ. ಕರ್ನಾಟಕದಾದ್ಯಂತ ಮುಂದಿನ ಐದು ದಿನಗಳ ಕಾಲ ಪೂರ್ವಮುಂಗಾರು ಮಳೆ ತೀವ್ರಗೊಳ್ಳಲಿದ್ದು, ಹವಾಮಾನ ಇಲಾಖೆಯು ವಿವಿಧ ಜಿಲ್ಲೆಗಳಿಗೆ ಎಚ್ಚರಿಕೆ ನೀಡಿದೆ. ಗಾಳಿಯ ವೇಗವು ಗಂಟೆಗೆ 40–50 ಕಿ.ಮೀ. ತಲುಪುವ ಸಾಧ್ಯತೆಯಿದ್ದು, ಆಲಿಕಲ್ಲು ಮಳೆಯ ಮುನ್ಸೂಚನೆಯೂ ಇದೆ. ರಾಜ್ಯದ ದಕ್ಷಿಣ ಒಳನಾಡು, ಉತ್ತರ ಒಳನಾಡು ಮತ್ತು ಮಲೆನಾಡು ಭಾಗಗಳಲ್ಲಿ ಗುಡುಗು, ಮಿಂಚು ಸಹಿತ ಮಳೆಯಾಗುವ ಸಾಧ್ಯತೆ ದಟ್ಟವಾಗಿದೆ.

ಮಳೆಯ ಸಮಯದಲ್ಲಿ ಗಾಳಿಯ ವೇಗವು ಗಂಟೆಗೆ 40 ರಿಂದ 50 ಕಿ.ಮೀ. ಇರಲಿದ್ದು, ಮರಗಳು ಅಥವಾ ವಿದ್ಯುತ್ ಕಂಬಗಳು ಬೀಳುವ ಸಂಭವವಿದೆ. ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು. ವಿಶೇಷವಾಗಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆಯಾಗುವ ಸಾಧ್ಯತೆಯಿದ್ದು, ಬೆಳೆಗಳಿಗೆ ಹಾನಿಯಾಗದಂತೆ ರೈತರು ಮುಂಜಾಗ್ರತೆ ವಹಿಸುವುದು ಉತ್ತಮ.

ಬೆಂಗಳೂರು, ಮೈಸೂರು, ಹಾಸನ, ಕೊಡಗು, ಬೆಳಗಾವಿ, ಧಾರವಾಡ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಹೆಚ್ಚಿನ ಮಳೆಯಾಗುವ ನಿರೀಕ್ಷೆಯಿದೆ. ತೆರೆದ ಮೈದಾನ, ಮರಗಳ ಕೆಳಗೆ ಅಥವಾ ಜಲಮೂಲಗಳ ಹತ್ತಿರ ಇರಬೇಡಿ. ಸುಭದ್ರವಾದ ಕಟ್ಟಡಗಳ ಒಳಗೆ ಆಶ್ರಯ ಪಡೆಯಿರಿ ಎಂದು ಹವಾಮಾನ ಇಲಾಖೆ ಹೇಳಿದೆ. ವಾಹನಗಳನ್ನು ಮರಗಳ ಕೆಳಗೆ ನಿಲ್ಲಿಸಬೇಡಿ. ಮನೆಯ ಕಿಟಕಿ ಮತ್ತು ಬಾಗಿಲುಗಳನ್ನು ಭದ್ರಪಡಿಸಿಕೊಳ್ಳಿ. ಕಟಾವು ಮಾಡಿದ ಬೆಳೆಗಳನ್ನು ಸುರಕ್ಷಿತ ಸ್ಥಳಗಳಲ್ಲಿ ಸಂಗ್ರಹಿಸಿಡಿ ಎಂದು ಮುನ್ನೆಚ್ಚರಿಕೆಯನ್ನು ನೀಡಿದ್ದಾರೆ.

## ಕುಮಾರಣ್ಣ ಸಿಎಂ ಆಗಲು ಸಂಕಲ್ಪ ಮಾಡಿ: ಎಚ್. ನಿಂಗಪ್ಪ

ತುಮಕೂರು: ಜೆಡಿಎಸ್ ವರಿಷ್ಠ ಎಚ್.ಡಿ. ಕುಮಾರಸ್ವಾಮಿ ಮತ್ತೊಮ್ಮೆ ಈ ರಾಜ್ಯದ ಮುಖ್ಯಮಂತ್ರಿಯಾಗಬೇಕು ಎಂದು ಆಸೆ ಹೊಂದಿರುವ ಪಕ್ಷದ ಕಾರ್ಯಕರ್ತರು ಆ ಆಸೆ ಈಡೇರಲು ಪಕ್ಷವನ್ನು ಸದೃಢವಾಗಿ ಸಂಘಟಿಸಲು ಶ್ರಮಿಸಬೇಕು. ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದರೂ ಜೆಡಿಎಸ್ ಅನ್ನು ಪ್ರಬಲವಾಗಿ ಸಂಘಟಿಸಲು ಎಲ್ಲಾ ಕಾರ್ಯಕರ್ತರು ಸಂಕಲ್ಪ ಮಾಡಬೇಕು ಎಂದು ತುಮಕೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಹೆಚ್. ನಿಂಗಪ್ಪ ಮನವಿ ಮಾಡಿದರು.



ತುಮಕೂರಿನ ಜೆಡಿಎಸ್ ಕಚೇರಿಯಲ್ಲಿ ನಗರ ಕಾರ್ಯಕರ್ತರ ಸಭೆ ಹಾಗೂ ಮಾಜಿ ಸಚಿವ ದಿ. ಲಕ್ಷ್ಮೀನರಸಿಂಹಯ್ಯನವರ ಅಭಿಮಾನಿ ಬಳಗದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಲಕ್ಷ್ಮೀನರಸಿಂಹಯ್ಯನವರ ಅಭಿಮಾನಿಗಳು ಜೆಡಿಎಸ್‌ನ ಸದಸ್ಯರಾಗಿ ಪಕ್ಷದ ಬೆಳವಣಿಗೆಗೆ ಸಹಕರಿಸಬೇಕು ಎಂದು ವಿನಂತಿಸಿದರು.

ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ನೇತೃತ್ವದಲ್ಲಿ, ಎಚ್.ಡಿ. ಕುಮಾರಸ್ವಾಮಿಯವರ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿ ಜೆಡಿಎಸ್ ಭದ್ರಕೋಟೆಯಾಗಿದೆ. ಮುಂದಿನ ಚುನಾವಣೆಗಳಲ್ಲಿ ಮೈತ್ರಿ ಪಕ್ಷದ ಅಭ್ಯರ್ಥಿಗಳು ಜಯ ಸಾಧಿಸಿ ಆಡಳಿತ ಚುಕ್ಕಾಣಿ ಹಿಡಿಯಬೇಕು. ಅದಕ್ಕಾಗಿ ಕಾರ್ಯಕರ್ತರು ಪಕ್ಷದ ಸಂಘಟನೆಗೆ ಶ್ರಮಿಸಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಜೆಡಿಎಸ್ ಪ್ರಬಲವಾಗಿ ಬೆಳೆದರೆ 2028ರ ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಪಡೆದು ಕುಮಾರಸ್ವಾಮಿಯವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ ಎಂದು ಹೆಚ್. ನಿಂಗಪ್ಪ ಹೇಳಿದರು.

ತುಮಕೂರು ನಗರಸಭೆ ಮಾಜಿ ಅಧ್ಯಕ್ಷ ಟಿ.ಹೆಚ್. ಜಯರಾಮ್ ಮಾತನಾಡಿ, ಮುಂದಿನ ನಗರಪಾಲಿಕೆ ಚುನಾವಣೆಯಲ್ಲಿ ಮೈತ್ರಿ ಪಕ್ಷದ ಅಭ್ಯರ್ಥಿಗಳು ಗೆದ್ದು ನಮ್ಮದೇ ಆಡಳಿತ ಸ್ಥಾಪನೆ ಆಗಲಿದೆ. ಸದ್ಯ ತುಮಕೂರು ನಗರಪಾಲಿಕೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಒಂದು ಖಾತೆ ಮಾಡಿಕೊಡಲೂ ಸತಾಯಿಸುತ್ತಾರೆ. ಇದರಿಂದ ನಗರದ ಜನ ರೋಸಿಹೋಗಿದ್ದಾರೆ, ಪಾಲಿಕೆ ಚುನಾವಣೆಗಾಗಿ ಕಾಯುತ್ತಿದ್ದಾರೆ. ನಮ್ಮದೇ ಪಕ್ಷದ ಆಡಳಿತ ಬಂದರೆ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

ನಗರಸಭೆ ಮಾಜಿ ಉಪಾಧ್ಯಕ್ಷ ಶ್ರೀನಿವಾಸ್‌ಪ್ರಸಾದ್, ಮುಖಂಡ ಎಸ್. ಪುಟ್ಟೀರಪ್ಪ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಟಿ.ಸಿ. ಪ್ರಭಾಕರ್, ಜಿಲ್ಲಾ ಜೆಡಿಎಸ್ ಮಾಜಿ ಕಾರ್ಯಾಧ್ಯಕ್ಷ ಟಿ.ಆರ್. ನಾಗರಾಜು, ಮುಖಂಡರಾದ ಟಿ.ಎಲ್.ಕುಂಭಯ್ಯ, ಮಾಜಿ ನಗರಸಭಾ ಸದಸ್ಯ ಹೆಚ್.ಆರ್. ಹನುಮಂತರಾಯಪ್ಪ, ಮುಖಂಡರಾದ ಯೋಗಾನಂದಕುಮಾರ್, ಮುಜಾಹಿದ್ ಪಾಷಾ ಮಾತನಾಡಿದರು.

ಮುಖಂಡರಾದ ಗಂಗಣ್ಣ, ಸೋಲಾರ್ ಕೃಷ್ಣಮೂರ್ತಿ, ಟಿ.ಎಲ್. ಕುಂಭಯ್ಯ, ನಗರಪಾಲಿಕೆ ಮಾಜಿ ಸದಸ್ಯರಾದ ಮೋಹನ್‌ಕುಮಾರ್, ರಾಮಕೃಷ್ಣಪ್ಪ, ಬಾಲಕೃಷ್ಣ, ಟಿ.ಜಿ.ನರಸಿಂಹರಾಜು, ಮರಿಗಂಗಯ್ಯ, ಧರಣೇಂದ್ರಕುಮಾರ್, ಹೆಚ್‌ಡಿಕೆ ಮಂಜುನಾಥ್, ಶ್ರೀನಿವಾಸ್, ಲಕ್ಷ್ಮೀನರಸಿಂಹರಾಜು, ಎಸ್.ಡಿ.ಕೃಷ್ಣಪ್ಪ, ವಿಜಯ್‌ಗೌಡ, ಮಧುಗೌಡ, ಮಂಜುನಾಥ್, ಕುಸುಮಾ ಜಗನ್ನಾಥ್, ಲೀಲಾವತಿ, ರೇಖಾ, ತಾಹೇರಾ ಕುಲ್ಸಂ, ಯಶೋಧ, ನೀಲಮ್ಮ, ವಿ.ಲಕ್ಷ್ಮೀಶ್‌ಗೌಡ ಭಾಗವಹಿಸಿದ್ದರು.

## ಸರ್ಕಾರಿ ಶಾಲೆಗಳ ಸಬಲೀಕರಣದತ್ತ ಸಮುದಾಯದ ಚಿತ್ತ



ಮಧುಗಿರಿ:ದೇಣಿಗೆಗಳನ್ನು ಸಂಗ್ರಹಿಸುವುದರ ಮೂಲಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸರ್ಕಾರಿ ಶಾಲೆಗಳನ್ನು ಭೌತಿಕವಾಗಿ ಸಬಲೀಕರಣಗೊಳಿಸುವತ್ತ ಸಮುದಾಯವು ಚಿತ್ತ ಹರಿಸಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ ಎನ್ ಹನುಮಂತರಾಯಪ್ಪ ತಿಳಿಸಿದರು.

ತಾಲ್ಲೂಕಿನ ಐ ಡಿ ಹಳ್ಳಿ ಹೋಬಳಿಯ ದೊಡ್ಡದಾಳವಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ –ಪೀಠೋಪಕರಣಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ದೊಡ್ಡದಾಳವಟ್ಟ ಸರ್ಕಾರಿ ಶಾಲೆಗೆ ಬೆಂಗಳೂರಿನ ರುಕ್ಸ್ ವೈರ್ ಲೆಸ್ ಲಿಮಿಟೆಡ್ ಕಂಪನಿಯವರು ಅಂದಾಜು 6 ಲಕ್ಷ ಮೌಲ್ಯದ ಪಾಠ–ಪೀಠೋಪಕರಣಗಳಾದ ಸ್ಮಾರ್ಟ್ ಟಿ. ವಿ, ಗ್ರೈಂಡರ್, ಚೈರ್ಸ್,ಸ್ಟೂಡೆಂಟ್ ಡೆಸ್ಕ್, ಓಪನ್ ಅಲಮೆರಾ,ಟೀಚರ್ ಟೇಬಲ್ಸ್, ಲ್ಯಾಪ್ಟಾಪ್ಗಳನ್ನು ದೇಣಿಗೆ ನೀಡಿರುವುದು ಶ್ಲಾಘನೀಯ. ಸಮುದಾಯದ ಸಹಕಾರ ಹೀಗೆಯೇ ಇದ್ದರೆ ಖಂಡಿತವಾಗಿಯೂ ಸರ್ಕಾರಿ ಶಾಲೆಗಳು ಮತ್ತಷ್ಟು ಗುಣಾತ್ಮಕ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿಯಾಗುತ್ತವೆ. ಇದೇ ವರ್ಷ ಘನ ಸರ್ಕಾರವು ಚಿಕ್ಕದಾಳವಟ್ಟ ಶಾಲೆಯನ್ನು ಕೆ ಪಿ ಎಸ್ ಶಾಲೆಯನ್ನಾಗಿ ಮಾರ್ಪಡಿಸಿದ್ದು ಎಲ್ಲರೂ ಅದನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ತಿಳಿಸಿದರು.

ಮುಖ್ಯ ಶಿಕ್ಷಕ ಬಿ .ಹನುಮಯ್ಯಮಾತನಾಡಿ ಇಷ್ಟು ದೊಡ್ಡ ಮೊತ್ತದ ದೇಣಿಗೆಗೆ ಕಾರಣರಾದ ರುಕ್ಸ್ ವೈರ್ ಲೆಸ್ ಕಂಪನಿಯ ನವೀನ್ ವಜ್ರವೆಲ್, ಜಯಸಿಂಹ, ನಾಗರಾಜ್,ಕ್ಲಾರೆನ್ಸ್, ವಿಶಾಲಾಕ್ಷಿ, ಪ್ರೇಮ ಮತ್ತು ಮಧುಸೂದನ್ ಭಟ್ ಅವರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷ ಕೃಷ್ಣಪ್ಪ, ಇ ಸಿ ಒ ಶ್ರೀನಿವಾಸ್ ಮೂರ್ತಿ, ಸಿ ಆರ್ ಪಿ ರಮೇಶ್ ಚೈತನ್ಯ ಸಿಂಚನ ಟ್ರಸ್ಟ್ ನ ಸದಸ್ಯ ಆನಂದ ಸ್ವಾಮಿ, ಗುರುಕುಲ ಟ್ರಸ್ಟ್ ವ್ಯವಸ್ಥಾಪಕ ಆನಂದ್ ಎಸ್ ಡಿ ಎಂ ಸಿ ಯ ನಾಗರಾಜ್ ಡಿ ಎಚ್ ನರೇಶ್ ಬಾಬು,ಭಾಸ್ಕರ್ ನಾರಾಯಣ ಸ್ವಾಮಿ, ಮುಖಂಡರಾದ ಲಕ್ಷ್ಮೀನಾರಾಯಣ, ಡಿ ಕೆ ನರಸಿಂಹಪ್ಪ, ಶಂಕರ್ ಪ್ರಜ್ವಲ್, ಶಿಕ್ಷಕರಾದ ಶಿವಕುಮಾರ್, ರಾಜೇಶ್ ಮತ್ತು ಮಂಜುಳಾ ಉಪಸ್ಥಿತರಿದ್ದರು

## ಏ.4ರಂದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ "ಜಿಲ್ಲಾ ಮಟ್ಟದ ಬೃಹತ್ ಜನತಾ ದರ್ಶನ"

ತುಮಕೂರು: ಜಿಲ್ಲೆಯ ನಾಗರಿಕರಿಂದ ಅಹವಾಲುಗಳನ್ನು ಸ್ವೀಕರಿಸಿ/ಸಮಸ್ಯೆಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯವನ್ನು ಒದಗಿಸಲು ಏಪ್ರಿಲ್ 4ರಂದು ಬೆಳಿಗ್ಗೆ 11 ಗಂಟೆಗೆ ತುಮಕೂರು ನಗರದಲ್ಲಿ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ "ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮ"ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಈಗಾಗಲೇ ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರಗಳನ್ನು ನೀಡಲಾಗಿದೆ. ಅಲ್ಲದೆ, ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಜಟಿಲ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಪರಿಹಾರವನ್ನು ನೀಡಲಾಗಿದೆ. ಅಂತೆಯೇ, ಏಪ್ರಿಲ್ 4ರಂದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಅಂದು ಬೆಳಿಗ್ಗೆ 11 ಗಂಟೆಗೆ ಮಹಾನಗರಪಾಲಿಕೆ ಆವರಣದಲ್ಲಿರುವ ಡಾ: ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿ ಮುಂಭಾಗದಲ್ಲಿ ನಿರ್ಮಿಸಲಾಗುವ ಬೃಹತ್ ವೇದಿಕೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಜಾಗದಲ್ಲಿ 10 ವಿವಿಧ ಪ್ರಮುಖ ಇಲಾಖೆಗಳ ಮಳಿಗೆಗಳನ್ನು ತೆರೆಯಲಾಗಿದ್ದು, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಾಗುವುದು. ಅಲ್ಲದೆ, ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರು ಸ್ಥಳದಲ್ಲಿ ಹಾಜರಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕಾರ್ಯಕ್ರಮ ಇದಾಗಿದೆ ಎಂದು ಅವರು ತಿಳಿಸಿದ್ದಾರೆ.

ಕಾರ್ಯಕ್ರಮ ಸ್ಥಳದಲ್ಲಿ ನಿರ್ಮಿಸಲಾಗುವ ತಾತ್ಕಾಲಿಕ ಮಳಿಗೆಗಳಲ್ಲಿ ಐಪಿಜಿಆರ್‌ಎಸ್ ತಂತ್ರಾಂಶ ಒಳಗೊಂಡ ಡಾಟಾ ಎಂಟ್ರಿ, ಕಂಪ್ಯೂಟರ್ ವ್ಯವಸ್ಥೆ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಸಂಬಂಧ ಈಗಾಗಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕಾರ್ಯಕ್ರಮ ರೂಪಿಸುವ ಸಂಬಂಧ ಆದೇಶವನ್ನು ನೀಡಲಾಗಿದ್ದು, ತಮಗೆ ವಹಿಸಿದ ಜವಾಬ್ದಾರಿಯನ್ನು ಲೋಪವಿಲ್ಲದೆ ನಿರ್ವಹಿಸುವಂತೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಜಿಲ್ಲಾದ್ಯಂತ ಆಗಮಿಸುವ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಎಲ್ಲಾ ಸೌಲಭ್ಯಗಳನ್ನು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಒದಗಿಸಲು ಕ್ರಮವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮಕ್ಕೆ ಆಗಮಿಸುವಂತೆ ಅವರು ತಿಳಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ತುಮುಲ್‌ಗೆ ಹೈಕೋರ್ಟ್ ಆದೇಶ: ಡೈರಿ ಚುನಾವಣೆ ಮರು ಎಣಿಕೆ: ಚೆನ್ನಮಲ್ಲಪ್ಪ, ಕೊಂಡವಾಡಿ ಚಂದ್ರಶೇಖರ್ ಆಯ್ಕೆ

ಪಾವಗಡ: ಜಿಲ್ಲೆಯ ಪ್ರತಿಷ್ಠಿತ ನಂದಿನಿ ಡೈರಿ (TUMUL) ಚುನಾವಣಾ ಕಣದಲ್ಲಿ ಭಾರಿ ರಾಜಕೀಯ ಸಂಚಲನ ಉಂಟಾಗಿದೆ. ಪಾವಗಡ ತಾಲೂಕು ನಿರ್ದೇಶಕರ ಸ್ಥಾನಕ್ಕೆ ನಡೆದಿದ್ದ ಸುದೀರ್ಘ ಚುನಾವಣಾ ಸಂಘರ್ಷಕ್ಕೆ ನ್ಯಾಯಾಲಯದ ಹಸ್ತಕ್ಷೇಪದ ನಂತರ ಇಂದು ತೆರೆ ಬಿದ್ದಿದ್ದು, ಮರು ಎಣಿಕೆಯಲ್ಲಿ ಚೆನ್ನಮಲ್ಲಪ್ಪ ಅವರು ಐತಿಹಾಸಿಕ ಜಯ ಸಾಧಿಸಿದ್ದಾರೆ.



ನ್ಯಾಯಾಲಯದ ಹಸ್ತಕ್ಷೇಪ ಮತ್ತು ಮರು ಎಣಿಕೆ ಕಳೆದ ಬಾರಿ ನಡೆದಿದ್ದ ಮತ ಎಣಿಕೆಯಲ್ಲಿ ಅಕ್ರಮ ಮತ್ತು ಗೊಂದಲಗಳು ನಡೆದಿವೆ ಎಂದು ಆರೋಪಿಸಿ ಚೆನ್ನಮಲ್ಲಪ್ಪ ಅವರು ನ್ಯಾಯಾಲಯದ ಮೊರೆ ಹೋಗಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯವು ಮರು ಎಣಿಕೆಗೆ ಕಟ್ಟುನಿಟ್ಟಿನ ಆದೇಶ ನೀಡಿತ್ತು. ಈ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಹಕಾರಿ ಇಲಾಖೆಯ ಆವರಣದಲ್ಲಿ ಬಿಗಿ ಪೊಲೀಸ್ ಭದ್ರತೆಯ ನಡುವೆ ಮರು ಎಣಿಕೆ ಪ್ರಕ್ರಿಯೆ ನಡೆಯಿತು. ಉಪ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ನಡೆದ ಅತ್ಯಂತ ಪಾರದರ್ಶಕ ಮತ ಎಣಿಕೆಯಲ್ಲಿ, ಪ್ರತಿ ಹಂತದಲ್ಲೂ ತೀವ್ರ ಕುತೂಹಲ ಮನೆ ಮಾಡಿತ್ತು. ಅಂತಿಮವಾಗಿ ಚೆನ್ನಮಲ್ಲಪ್ಪ ಅವರು ತಮ್ಮ ಪ್ರತಿಸ್ಪರ್ಧಿಗಿಂತ 4 ಮತಗಳ ಅಂತರದಿಂದ ಜಯಗಳಿಸಿರುವುದಾಗಿ ಘೋಷಿಸಲಾಯಿತು. ಈ ಮೂಲಕ ಚೆನ್ನಮಲ್ಲಪ್ಪ ಅವರು ಅಧಿಕೃತವಾಗಿ ತುಮುಲ್ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಗೆಲುವಿನ ಸುದ್ದಿ ತಿಳಿಯುತ್ತಿದ್ದಂತೆ ಜೆಡಿಎಸ್ ಮತ್ತು ಬಿಜೆಪಿ ಮುಖಂಡರ ದಂಡೇ ಹರಿದು ಬಂದಿತು. ಜೆಡಿಎಸ್ ಜಿಲ್ಲಾ ಮಾಜಿ ಅಧ್ಯಕ್ಷ ಆರ್.ಸಿ. ಅಂಜನಪ್ಪ, ರಾಷ್ಟ್ರೀಯ ಪಾರ್ಲಿಮೆಂಟರಿ ಸದಸ್ಯ ಎನ್. ತಿಮ್ಮಾರೆಡ್ಡಿ, ಮಾಜಿ ಶಾಸಕ ಕೆ.ಎಂ. ತಿಮ್ಮರಾಯಪ್ಪ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎನ್.ಎ. ಈರಣ್ಣ ಹಾಗೂ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸೊಗಡು ವೆಂಕಟೇಶ್ ಅವರು ವಿಜೇತ ಅಭ್ಯರ್ಥಿಗೆ ಮಾಲಾರ್ಪಣೆ ಮಾಡಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗಂಗಾಧರ ನಾಯ್ಡು, ನೇರಳೆಕುಂಟೆ ಭರತ್, ಮನು ಮಹೇಶ್, ಕೆ.ವಿ. ಶ್ರೀನಿವಾಸ್ ಹಾಗೂ ಬಿಜೆಪಿಯ ಪ್ರಮುಖರಾದ ರಂಗಣ್ಣ, ತಿಪ್ಪೇಸ್ವಾಮಿ ಸೇರಿದಂತೆ ನೂರಾರು ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಗೆಲುವಿನ ನಂತರ ಮಾತನಾಡಿದ ಚೆನ್ನಮಲ್ಲಪ್ಪ ಅವರು, "ಇದು ನನ್ನ ವೈಯಕ್ತಿಕ ಗೆಲುವಲ್ಲ, ಬದಲಿಗೆ ಸತ್ಯ ಮತ್ತು ನ್ಯಾಯಕ್ಕೆ ಸಂದ ಜಯ. ನ್ಯಾಯಾಲಯದ ಮೇಲೆ ನಮಗೆ ಅಪಾರ ನಂಬಿಕೆ ಇತ್ತು. ತಾಲೂಕಿನ ಹೈನುಗಾರರ ಏಳಿಗೆಗಾಗಿ ಮತ್ತು ಸಂಘದ ಅಭಿವೃದ್ಧಿಗಾಗಿ ನಾನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ," ಎಂದು ಭಾವುಕರಾಗಿ ನುಡಿದರು.

ಹಾಗೆಯೇ ಮಧುಗಿರಿ ಕ್ಷೇತ್ರದಿಂದ ನಾಗೇಶ್ ಬಾಬು ಅವರು ಅನರ್ಹಗೊಂಡಿರುವುದರಿಂದ ಪ್ರತಿಸ್ಪರ್ಧಿ ಕೊಂಡವಾಡಿ ಚಂದ್ರಶೇಖರ್ ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳು ಘೋಷಿಸಿದರು.

ಈ ಗೆಲುವು ಪಾವಗಡ ಕ್ಷೇತ್ರದಲ್ಲಿ ಜೆಡಿಎಸ್ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ತುಂಬಿದ್ದು, ಮುಂಬರುವ ರಾಜಕೀಯ ಬೆಳವಣಿಗೆಗಳಿಗೆ ಮುನ್ನುಡಿ ಬರೆದಿದೆ.

ತುಮಕೂರು ಹಾಲು ಒಕ್ಕೂಟದ ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ನಾಹಿದಾ ಜಮ್ ಜಮ್ ಅವರ ನೇತೃತ್ವದಲ್ಲಿ ಇಂದು ಮರು ಮತ ಎಣಿಕೆ ನಡೆಸಿದಾಗ ಪಾವಗಡ ಕ್ಷೇತ್ರದಿಂದ ಚನ್ನಮಲ್ಲಯ್ಯ ಅವರು 25 ಮತ ಹಾಗೂ ಈ ಹಿಂದೆ ಗೆಲುವು ಸಾಧಿಸಿದ್ದ ಚಂದ್ರಶೇಖರರೆಡ್ಡಿ 21 ಮತ ಪಡೆದಿರುವುದು ಬೆಳಕಿಗೆ ಬಂದಿತು. ಹೀಗಾಗಿ ಈ ಹಿಂದೆ ಪರಾಭವಗೊಂಡಿದ್ದ ಚನ್ನಮಲ್ಲಯ್ಯರವರು ಇಂದಿನ ಮರು ಮತ ಎಣಿಕೆಯಲ್ಲಿ 25 ಮತಗಳನ್ನು ಪಡೆದು ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

# ಶ್ರೀವಿಷ್ಣುವಿನ ಏಳನೆಯ ಅವತಾರನಾದ ಶ್ರೀರಾಮನ ಜನ್ಮ ಪ್ರೀತ್ಯರ್ಥವಾಗಿ ಶ್ರೀರಾಮ ನವಮಿ

ಶ್ರೀವಿಷ್ಣುವಿನ ಏಳನೆಯ ಅವತಾರನಾದ ಶ್ರೀರಾಮನ ಜನ್ಮ ಪ್ರೀತ್ಯರ್ಥವಾಗಿ ಶ್ರೀರಾಮ ನವಮಿಯನ್ನು ಆಚರಿಸುತ್ತಾರೆ. ಈ ದಿನ ಪುನರ್ವಸು ನಕ್ಷತ್ರದಲ್ಲಿ, ಮಧ್ಯಾಹ್ನದಲ್ಲಿ, ಕರ್ಕ ಲಗ್ನದಲ್ಲಿ ಸೂರ್ಯಾದಿ ಐದು ಗ್ರಹಗಳಿದ್ದಾಗ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ಜನ್ಮವಾಯಿತು.

ಶ್ರೀರಾಮನವಮಿಯ ಆಧ್ಯಾತ್ಮಿಕ ಲಾಭವನ್ನು ಪಡೆಯಿರಿ

ದೇವತೆಗಳು ಮತ್ತು ಅವತಾರಗಳ ಜನ್ಮತಿಥಿಯಂದು ಭೂಮಿಯ ಮೇಲೆ ಅವರ ತತ್ತ್ವವು ಹೆಚ್ಚು ಪ್ರಮಾಣದಲ್ಲಿ ಕಾರ್ಯನಿರತವಾಗಿರುತ್ತದೆ. ಶ್ರೀರಾಮ ನವಮಿಗೆ ಶ್ರೀರಾಮತತ್ತ್ವವು ಎಂದಿಗಿಂತ 1000 ಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ. ಶ್ರೀರಾಮ ನವಮಿಗೆ 'ಶ್ರೀರಾಮ ಜಯ ರಾಮ ಜಯ ರಾಮ।' ನಾಮಜಪ, ಹಾಗೆಯೇ ಶ್ರೀರಾಮನ ಇತರ ಉಪಾಸನೆಗಳನ್ನು ಭಾವಪೂರ್ಣವಾಗಿ ಮಾಡುವುದರಿಂದ ಶ್ರೀರಾಮತತ್ತ್ವದ ಲಾಭವನ್ನು ಆದಷ್ಟು ಹೆಚ್ಚು ಪಡೆಯಲು ಸಹಾಯವಾಗುತ್ತದೆ.

ಶ್ರೀರಾಮನವಮಿಯನ್ನು ಆಚರಿಸುವ ಪದ್ಧತಿ

ಅನೇಕ ರಾಮ ಮಂದಿರಗಳಲ್ಲಿ ಚೈತ್ರ ಶುಕ್ಲ ಪ್ರತಿಪದೆಯಿಂದ ಒಂಭತ್ತು ದಿನಗಳ ಕಾಲ ಈ ಉತ್ಸವವು ನಡೆಯುತ್ತದೆ. ರಾಮಾಯಣದ ಪಾರಾಯಣ, ಹರಿಕಥೆ ಮತ್ತು ರಾಮನ ಮೂರ್ತಿಗೆ ವಿವಿಧ ಶೃಂಗಾರ ಮುಂತಾದವುಗಳೊಂದಿಗೆ ಈ ಉತ್ಸವವನ್ನು ಆಚರಿಸುತ್ತಾರೆ.



ನವಮಿಯಂದು ಮಧ್ಯಾಹ್ನ ರಾಮಜನ್ಮದ ಕೀರ್ತನೆ (ಹರಿಕಥೆ) ಯಾಗುತ್ತದೆ. ಮಧ್ಯಾಹ್ನ ಕುಂಚಿಗೆ (ಮಗುವಿನ ತಲೆಗೆ ಕಟ್ಟುವ ಒಂದು ವಸ್ತ್ರ. ಈ ವಸ್ತ್ರವು ಬೆನ್ನಿನವರೆಗೆ ಇರುತ್ತದೆ.) ಹಾಕಿದ ತೆಂಗಿನಕಾಯಿಯನ್ನು ತೊಟ್ಟಿಲಿನಲ್ಲಿಟ್ಟು ತೂಗುತ್ತಾರೆ. ಭಕ್ತರು ಅದರ ಮೇಲೆ, ಗುಲಾಲು ಮತ್ತು ಹೂವುಗಳನ್ನು ಅರ್ಪಿಸುತ್ತಾರೆ.' (ಕೆಲವು ಕಡೆಗಳಲ್ಲಿ ತೆಂಗಿನ ಕಾಯಿಯ ಬದಲು ಶ್ರೀರಾಮನ ಮೂರ್ತಿಯನ್ನು ತೊಟ್ಟಿಲಿನಲ್ಲಿ ಇಡುತ್ತಾರೆ. ಸಂಕಲನಕಾರರು) ಈ ಸಂದರ್ಭದಲ್ಲಿ ಶ್ರೀರಾಮನ ಜನ್ಮದ ಗೀತೆಯನ್ನು ಹೇಳಲಾಗುತ್ತದೆ. ಅದರ ನಂತರ ಶ್ರೀರಾಮನ ಮೂರ್ತಿಯನ್ನು ಪೂಜಿಸುತ್ತಾರೆ ಮತ್ತು ಪ್ರಸಾದವೆಂದು ಶುಂಠಿಚೂರ್ಣವನ್ನು ಕೊಡುತ್ತಾರೆ. ಕೆಲವು ಕಡೆಗಳಲ್ಲಿ ಶುಂಠಿಚೂರ್ಣದೊಂದಿಗೆ ಮಹಾಪ್ರಸಾದವನ್ನೂ ನೀಡುತ್ತಾರೆ.

ಶ್ರೀರಾಮನವಮಿಯ ಮಹತ್ವ

ತ್ರೇತಾಯುಗದಲ್ಲಿ ರಾಮನ ಜನ್ಮವಾದಾಗ ಕಾರ್ಯನಿರತವಾಗಿದ್ದ ಶ್ರೀವಿಷ್ಣುವಿನ ಸಂಕಲ್ಪ, ತ್ರೇತಾಯುಗದಲ್ಲಿನ ಅಯೋಧ್ಯಾವಾಸಿಗಳ ಭಕ್ತಿ ಭಾವ ಮತ್ತು ಪೃಥ್ವಿಯಲ್ಲಿನ ಸಾತ್ತ್ವಿಕ ವಾತಾವರಣದಿಂದಾಗಿ ಪ್ರಭು ಶ್ರೀರಾಮನ ಜನ್ಮದಿಂದ ಶೇ. 100 ರಷ್ಟು ಪರಿಣಾಮವಾಗಿತ್ತು. ಅನಂತರ ಪ್ರತಿವರ್ಷ ಬರುವಂತಹ ಚೈತ್ರ ಶುಕ್ಲ ನವಮಿಗೆ ಬ್ರಹ್ಮಾಂಡದಲ್ಲಿನ ವಾತಾವರಣದಲ್ಲಿ ರಾಮತತ್ತ್ವವು ಪ್ರಕ್ಷೇಪಿಸಿ ವಾತಾವರಣವನ್ನು ಸಾತ್ತ್ವಿಕ ಮತ್ತು ಚೈತನ್ಯಮಯವನ್ನಾಗಿಸಲು ವಿಷ್ಣುಲೋಕದಿಂದ ಶ್ರೀರಾಮತತ್ತ್ವಯುಕ್ತ ವಿಷ್ಣುತತ್ತ್ವವು ಭೂಲೋಕದ ದಿಕ್ಕಿನತ್ತ ಪ್ರಕ್ಷೇಪಿತವಾಗುತ್ತದೆ ಮತ್ತು ಆ ದಿನ ಶ್ರೀರಾಮನ ಅಂಶಾತ್ಮಕ ಜನ್ಮವಾಗುತ್ತದೆ. ಇದರ ಪರಿಣಾಮ ಇಡೀ ವರ್ಷವಿದ್ದು ಬ್ರಹ್ಮಾಂಡದಲ್ಲಿ ರಾಮ ತತ್ತ್ವಯುಕ್ತ ಸಾತ್ತ್ವಿಕತೆ ಮತ್ತು ಚೈತನ್ಯದ ಪ್ರಕ್ಷೇಪಣೆಯಾಗುತ್ತದೆ. ರಾಮ ತತ್ತ್ವಯುಕ್ತ ಸಾತ್ತ್ವಿಕತೆ ಮತ್ತು ಚೈತನ್ಯವನ್ನು ಬ್ರಹ್ಮಾಂಡದಲ್ಲಿನ ಪ್ರತಿಯೊಂದು ಸಜೀವ ಮತ್ತು ನಿರ್ಜೀವ ವಸ್ತುಗಳು ಗ್ರಹಿಸಿಕೊಳ್ಳುತ್ತವೆ ಮತ್ತು ಅದರಿಂದ ಅವುಗಳಿಗೆ ತಮ್ಮ ಕಾರ್ಯವನ್ನು ಒಳ್ಳೆಯ ರೀತಿಯಿಂದ ಮಾಡಲು ಸಾಧ್ಯವಾಗುತ್ತದೆ.

ರಾಮಭಕ್ತರ ಮಹತ್ವ

ಶ್ರೀರಾಮನಂತೂ ಶ್ರೇಷ್ಠ ಮತ್ತು ಪೂಜನೀಯನಾಗಿದ್ದನು, ಅಲ್ಲದೆ ಅವನ ಭಕ್ತರೂ ಅಷ್ಟೇ ವಂದನೀಯರಾಗಿದ್ದರು. ಕಲಿಯುಗದಲ್ಲಿ ಶ್ರೀರಾಮನು ಪುನಃ ಅವತಾರ ತಾಳಬಹುದು. ಆದರೆ ಶ್ರೀರಾಮನ ಸೀಮಾತೀತ ಭಕ್ತಿಯನ್ನು ಮಾಡುವಂತಹ ಉಚ್ಚ ಮಟ್ಟದ ಭಕ್ತರು ಸಿಗುವುದು ಕಠಿಣವಾಗಿದೆ. ಸಾಧಕರು ಶ್ರೀರಾಮನ ಭಕ್ತರ ಗುಣಗಳನ್ನು ಅಂಗೀಕರಿಸಿ ಅದಕ್ಕನುಸಾರ ಸಾಧನೆ ಮಾಡಿದರೆ ಅವರ ಮೇಲೆ ಗುರುರೂಪೀ ಶ್ರೀರಾಮನ ಕೃಪೆಯಾಗಿ ಅವರಿಗೆ ಅಂತರ್ಬಾಹ್ಯ ಕ್ಷಾತ್ರಧರ್ಮ ಹೋರಾಟವನ್ನು ಯಶಸ್ವಿಯಾಗಿ ನಡೆಸಲು ಆಗುವುದು ಮತ್ತು ಅವರಲ್ಲಿ ಅಂತರ್ಬಾಹ್ಯ ರಾಮರಾಜ್ಯವು ಖಂಡಿತವಾಗಿಯೂ ಸ್ಥಾಪನೆಯಾಗುವುದು.

ಆಧಾರ : ಸನಾತನ ಸಂಸ್ಥೆ ನಿರ್ಮಿಸಿದ ಗ್ರಂಥ 'ಹಬ್ಬಗಳನ್ನು ಆಚರಿಸುವ ಯೋಗ್ಯ ಪದ್ಧತಿ ಮತ್ತು ಶಾಸ್ತ್ರ'

# ಉದ್ಯಮಶೀಲರಾಗಲು ಸ್ವ-ಉದ್ಯೋಗ ಜೊತೆಗೆ 'ಬಹು ಉದ್ಯಮ ತರಬೇತಿ ಕೇಂದ್ರಗಳ ಸಹಕಾರ ಪಡೆಯಿರಿ

ಉದ್ಯಮಶೀಲರಾಗಲು, ಸ್ವ-ಉದ್ಯೋಗ ಕೈಗೊಳ್ಳಲು ಎಲ್ಲಾ ರೀತಿಯ ಸಹಾಯ ವೇದಿಕೆ 'ಕೇಂದ್ರ ಖಾದಿ ಗ್ರಾಮೋದ್ಯೋಗ ಆಯೋಗ'ದಡಿ ಕಾರ್ಯ ನಿರ್ವಹಿಸುತ್ತಿರುವ 'ಬಹು ಉದ್ಯಮ ತರಬೇತಿ ಕೇಂದ್ರಗಳು' ಎಂದು ಬೆಂಗಳೂರಿನ ಖಾದಿ ಗ್ರಾಮೋದ್ಯೋಗ ಆಯೋಗದ ನಿವೃತ್ತ ಉಪ-ನಿರ್ದೇಶಕರಾದ ಶ್ರೀ ಕೆ. ಎಸ್. ಕೆಂಪರಾಜು ರವರು ತಿಳಿಸಿದರು.

ತುಮಕೂರು ನಗರದ 'ಕನ್ನಡ ಭವನ'ದಲ್ಲಿ ಮಂಗಳವಾರದಂದು ಕೇಂದ್ರ ಖಾದಿ ಗ್ರಾಮೋದ್ಯೋಗ ಆಯೋಗದ ಬೆಂಗಳೂರಿನ ಬಹು ಉದ್ಯಮಗಳ ತರಬೇತಿ ಕೇಂದ್ರಗಳು, ಬೆಂಗಳೂರಿನ ಸೃಷ್ಠಿ ಸಮೃದ್ಧಿ ಮಹಿಳಾ ಅಭಿವೃದ್ಧಿ ಮತ್ತು ಫೌಂಡೇಶನ್ ಹಾಗೂ ತುಮಕೂರಿನ ಶ್ರೀ ಸಾಯಿ ಸಂಜೀವಿನಿ ಸೇವಾಶ್ರಮ ಸರ್ಕಾರೇತರ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಮಾಧ್ಯಮ ಪಾಲುದಾರರಾದ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆ, ತುಮಕೂರಿನ ಮರಳೂರಿನಲ್ಲಿರುವ ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ಸಹಕಾರದೊಂದಿಗೆ ಆಯೋಜಿಸಿದ್ದ 'ಕೇಂದ್ರ ಸರ್ಕಾರ ಅಧೀನ ಇಲಾಖಾ ಪ್ರಮಾಣೀಕೃತ ಕೌಶಲ್ಯಾಭಿವೃದ್ಧಿ ತರಬೇತಿ ಜಾಗೃತಿ ಕಾರ್ಯಗಾರ'ದಲ್ಲಿ ಮಾತನಾಡುತ್ತಾ ತಿಳಿಸಿದರು.

ಇಲಾಖೆಯ ಪ್ರಸ್ತುತ ಲಭ್ಯವಿರುವ ವಿವಿಧ ತರಬೇತಿ ಹಾಗೂ ಇಲಾಖೆಯು ತರಬೇತಿ ನೀಡುವುದಲ್ಲದೆ ಅಗತ್ಯ ಮಾರುಕಟ್ಟೆ ನಿರ್ಮಾಣ ಹಾಘೂ ವಿಸ್ತರಣೆ, ಅವಶ್ಯ ಯಂತ್ರಗಳು, ಮೂಲಭೂತ ಸೌಕರ್ಯಗಳು ಹಾಗೂ ಇವುಗಳನ್ನು ಅವಶ್ಯವಾದ ಆರ್ಥಿಕ ನೆರವಾಗಿ ಅರ್ಹರಿಗೆ ರೂ.50 ಲಕ್ಷಗಳವರೆಗೆ ಸಾಲ ಸೌಲಭ್ಯ ಮತ್ತು ದೊರೆಯುವ ಸಬ್ಸಿಡಿ ಹೀಗೆ ಸರ್ವ ವಿಧದಲ್ಲೂ ತರಬೇತಿ ಪಡೆದ ಫಲಾನುಭವಿಗಳಿಗೆ ದೊರೆಯುವ ಬೆಂಬಲವನ್ನು ಮನದಟ್ಟಾಗುವಂತೆ ವಿವರಿಸಿದರು.

ಪತ್ರಕರ್ತ ಚಂದನ್ ಮಾತನಾಡಿ "ಮನೆಯಲ್ಲಿ ಬೆಳೆಯುವ ಹಂತದಲ್ಲೇ ಪೋಷಕರಿಂದ ಕಲಿಯುವ ಪ್ರತಿ ಕೆಲಸವು ಉದಾಹರಣೆಗೆ ಅಡುಗೆ, ಹಾಲು ಕರೆಯುವುದು ಕೌಶಲ್ಯಗಳೇ. ಮನೆಯಲ್ಲೇ ಕೌಶಲ್ಯ ತರಬೇತಿ ಪ್ರಾರಂಭವಾಗುತ್ತದೆ. ಝೊಮಾಟೊ, ಸ್ವಿಗ್ಗಿ, ಬ್ಲಿಂಕಿಟ್, ಓಲಾ ಹೀಗೆ ವಿನೂತನವಾಗಿ ಯೋಚನೆಗಳೊಂದಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಒಂದು ಕೌಶಲ್ಯ. ಕೌಶಲ್ಯಗಳನ್ನು ಬೆಳೇಸಿಕೊಂಡರೆ ನಾವು ಎಂತಹ ಸಂದರ್ಭದಲ್ಲೂ ಜೀವನ ನಡೆಸಲು ಸಹಕಾರಿಯಾಗುತ್ತದೆ. ಪ್ರಸ್ತುತ ಯುವ ಪೀಳಿಗೆ ಹಾಗೂ



ವಿದ್ಯಾರ್ಥಿಗಳಿಗೆ ಇಂತಹ ಕಾರ್ಯಗಾರಗಳು ಅತ್ಯಂತ ಅವಶ್ಯವಾಗಿದೆ. ಕೇವಲ ಪಠ್ಯ ಶಿಕ್ಷಣದಿಂದ ಬದುಕು ದುಸ್ತರ, ಜೊತೆಗೆ ಅಗತ್ಯ ಕೌಶಲ್ಯವು ಇರಲೇಬೇಕು" ಎಂಬುದನ್ನು ಸೂಕ್ತ ಧೃಷ್ಠಾಂತಗಳೊಂದಿಗೆ ವಿವರಿಸಿದರು.

ತುಮಕೂರಿನ ಕ್ಯಾತ್ಸಂದ್ರದ ಉಮಾಪ್ರಗತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆಂಪರಾಜು ರವರು ಮಾತನಾಡುತ್ತಾ "ಪ್ರತಿ ವಿದ್ಯಾರ್ಥಿಯು ಪಠ್ಯ ಶಿಕ್ಷಣದ ಜೊತೆಗೆ ತನ್ನ ಆಸಕ್ತ ಕ್ಷೇತ್ರದಲ್ಲಿ ವಿಶೇಷ ಕೌಶಲ್ಯಗಳನ್ನ ಬೆಳೆಸಿಕೊಂಡಲ್ಲಿ ಉದ್ಯೋಗ ಹುಡುಕುವ ಬದಲು ಮತ್ತೊಬ್ಬರಿಗೆ ಉದ್ಯೋಗ ನೀಡುವ ಉದ್ಯಮಿಯಾಗಬಲ್ಲಿರಿ. ಇಂತಹ ಕಾರ್ಯಗಾರಗಳು ನಗರ ಮಾತ್ರವಲ್ಲದೆ ಅತೀ ಹಿಂದುಳಿದಿರುವ ಪ್ರದೇಶಗಳು, ಗ್ರಾಮೀಣ ಪ್ರದೇಶಗಳಲ್ಲೂ ಪಸರಿಸಬೇಕು ಹಾಗೆ ಪ್ರತಿ ವಿದ್ಯಾ ಸಂಸ್ಥೆಗಳಲ್ಲೂ ಪ್ರತಿ ವರ್ಷ ಆಯೋಜಿಸಬೇಕು" ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸೃಷ್ಠಿ ಸಮೃದ್ಧಿ ಮಹಿಳಾ ಅಭಿವೃದ್ಧಿ ಮತ್ತು ಫೌಂಡೇಶನ್ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಚೂಡಾಮಣಿ ರವರು ತಮ್ಮ ಸಂಸ್ಥೆಯ ವತಿಯಿಂದ ನೀಡುತ್ತಿರುವ ಕೇಂದ್ರ ಖಾದಿ ಗ್ರಾಮೋದ್ಯೋಗ ಆಯೋಗ ಯೋಜನೆಗಳ ತರಬೇತಿಗಳ ಮತ್ತು ಅದರ ಸಾಧನೆಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸುತ್ತಾ ತುಮಕೂರಿನ ಶ್ರೀ ಸಾಯಿ ಸಂಜೀವಿನಿ ಸೇವಾಶ್ರಮದ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಕುರಿತು ವಿವರಿಸಿದರು.

ತುಮಕೂರಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಕೆ. ಎಸ್. ಸಿದ್ದಲಿಂಗಪ್ಪ ರವರು ಕಾರ್ಯಗಾರದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮವನ್ನು ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳಾದ ವರ್ಷಿತರವರು ಅಚ್ಚುಕಟ್ಟಾಗಿ ನಿರೂಪಿಸಿದರೆ, . ವಿಶ್ವನಾಥ್ ಪ್ರಾರ್ಥನೆಯೊಂದಿಗೆ ಚಾಲನೆ ನೀಡಿದರು. ವೇದಿಕೆಯ ಗಣ್ಯರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರೆ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆ ಸಂಪಾದಕರಾದ ರವಿಕುಮಾರ್ .ಸಿ ಹೆಚ್. ರವರು ಸ್ವಾಗತಿಸಿದರು, ಸಾಯಿ ಸಂಜೀವಿನಿ ಸೇವಾಶ್ರಮದ ಅಧ್ಯಕ್ಷರಾದ ಕಿರಣ್ .ಸಿ .ಎನ್. ವಂದಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೇಂದ್ರ ಖಾದಿ ಗ್ರಾಮೋದ್ಯೋಗ ಆಯೋಗದ ಉಪ-ನಿರ್ದೇಶಕರು ಮತ್ತು ಪ್ರಾಂಶುಪಾಲರಾದ ಶ್ರೀ ಬಂಗಾರ ನಾಯಕ .ವಿ ಹಾಗೂ ನಿವೃತ್ತ ಉಪ-ನಿರ್ದೇಶಕರಾದ ಶ್ರೀ ಕೆ, ಎಸ್. ಕೆಂಪರಾಜು, ತುಮಕೂರಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಕೆ. ಎಸ್. ಸಿದ್ದಲಿಂಗಪ್ಪ, ಜಯನುಡಿ ಕನ್ನಡ ದಿನಪತ್ರಿಕೆ ಸಂಪಾದಕರು ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಶ್ರೀ ಜಯನುಡಿ ಜಯಣ್ಣ, ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಬಿ. ಟಿ. ಮುದ್ದೇಶ್, ತುಮಕೂರಿನ ಕ್ಯಾತ್ಸಂದ್ರದಲ್ಲಿರುವ ಉಮಾಪ್ರಗತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆಂಪರಾಜು, ಸೃಷ್ಠಿ ಸಮೃದ್ಧಿ ಮಹಿಳಾ ಅಭಿವೃದ್ಧಿ ಮತ್ತು ಫೌಂಡೇಶನ್ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಚೂಡಾಮಣಿ, ಸದಸ್ಯರು ಹಾಗೂ ದೀಪದ ಬತ್ತಿ ತಯಾರಿಕಾ ತರಬೇತಿ ಉಸ್ತುವಾರಿ ವಹಿಸಿರುವ ಮತಿ ಶ್ರೀ ಶಿಲ್ಪ, ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸಂಪಾದಕರಾದ ರವಿಕುಮಾರ್ .ಸಿ .ಹೆಚ್., ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ಸಮುದಾಯ ಬಾನುಲಿ ಕೇಂದ್ರ ರೇಡಿಯೋ ಸಿದ್ಧಾರ್ಥ 90.8 ಎಫ್. ಎಂ.ನ ಸಿಬ್ಬಂದಿಗಳಾದ ಶ್ರೀ ಗೌತಮ್ .ಎ .ವಿ, ಶ್ರೀಮತಿ ಮಧುಶ್ರೀ, ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳು, ಉಮಾಪ್ರಗತಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಶ್ರೀ ಸಾಯಿ ಸಂಜೀವಿನಿ ಸೇವಾಶ್ರಮದ ಅಧ್ಯಕ್ಷರಾದ ಶ್ರೀ ಕಿರಣ್ .ಸಿ .ಎನ್. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ಮಂಕುತಿಮ್ಮನ ದೊಡ್ಡಣ್ಣ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಇವರು ಶಾಂತಿದೂತರೋ ಅಥವಾ ಭಯಭೀತರೋ!!

ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ।
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ ॥
ಉದ್ಧರಿಸುವೆನು ಜಗವನೆನ್ನುತಿಹ ಸಖನೆ, ನಿ
ನ್ನುದ್ಧಾರವೆಷ್ಟಾಯ್ತೋ – ಮಂಕುತಿಮ್ಮ ॥

ಮಂಕುತಿಮ್ಮನನ್ನುದ್ದೇಶಿಸಿ ಡಿವಿಜಿಯವರು ಹೇಳಿದ ಈ ಮಾತು ಇವತ್ತು ಮತ್ತೆ ಮತ್ತೆ ನಮ್ಮಜ್ಞಾಪಕಕ್ಕೆ ಬರುತ್ತಿದೆ.

ಇವತ್ತು ಕೆಲವು ದೇಶಗಳು ಮಂಕು ತಿಮ್ಮನಂತೆ ಆಡಿ ಕೊಂಡಿವೆ. ಅವುಗಳಲ್ಲಿ ಯುದ್ಧೋನ್ಮಾದ ತುಂಬಿಕೊಂಡಿದೆ. ಈ ಸಂದರ್ಭದಲ್ಲಿ, ಅಮೇರಿಕಾವಂತೂ ಮಂಕುತಿಮ್ಮನ ದೊಡ್ಡಣ್ಣ ನಂತೆ ಆಡಿಕೊಂಡಿದೆ. ಇದು ವರೆಗೆ ಅಮೇರಿಕಾವನ್ನು ಪ್ರಪಂಚದ "ದೊಡ್ಡಣ್ಣ" ಎಂದು ಭಾವಿಸಲಾಗುತ್ತಿತ್ತು. ಇನ್ನು ಮುಂದೆ, ಅಮೇರಿಕಾವನ್ನು ಮಂಕುತಿಮ್ಮನ "ದೊಡ್ಡಣ್ಣ" ಎಂದು ಮಾತ್ರ ಕರೆಯಬೇಕು.

ಅಮೇರಿಕಾದ ಅಧ್ಯಕ್ಷ ಡೋನಾಲ್ಡ್ ಟ್ರಂಪ್‌ನನ್ನು ನಿಗ್ರಹಿಸುವುದೇ ಕಠಿಣವೆನಿಸಿದೆ. ಟ್ರಂಪ್ ಈಗ ಸಮರಾಸುರನಾಗಿದ್ದಾನೆ. ಈಗೇನೋ ಟ್ರಂಪ್ ಇರಾನ್ ಮೇಲೆ ಉರಿದು ಕೊಂಡಿದ್ದಾನೆ.

ಕೆಲವು ದಿನಗಳ ಹಿಂದೆ ನಮ್ಮ ದೇಶದ ಮೇಲೆ ಕೂಡ ಘೂತ್ಕರಿಸಿಕೊಂಡು ಟ್ರಂಪ್ ಸುಂಕ ಸಮರವನ್ನು ಘೋಷಿಸಿದರು.ಮೋದಿಯವರು ಟ್ರಂಪ್‌ಗೆ ಉಪ್ಪು ಸೊಪ್ಪು ಹೆಪ್ಪು ಹಾಕುವುದಕ್ಕೆ ಹೋಗಲಿಲ್ಲ.

ಟ್ರಂಪ್ ಅಲ್ಲಿಯೇ ತಣ್ಣಗಾದರು. ಅವತ್ತು ದೇವಲೋಕ, ಭೂಲೋಕ, ಪಾತಾಳಲೋಕದಲ್ಲಿ ತಾರಕಾಸುರ ಸದ್ದು, ಗದ್ದಲ ಮಾಡಿಕೊಂಡಿದ್ದ. ಈಗ ಆ ಕೆಲಸವನ್ನು "ಟ್ರಂಪಾಸುರ" ಮಾಡುತ್ತಿದ್ದಾರೆ.ಡೋನಾಲ್ಡ್‌ಟ್ರಂಪ್‌ಒಂದಷ್ಟುತಮ್ಮಮುಂಗೋಪವನ್ನು ಬಿಟ್ಟು ಶಾಂತಿ, ಸಮಾಧಾನದಿಂದ ವರ್ತಿಸಿಕೊಂಡಿದ್ದರೆ ಅವರನ್ನುಎಲ್ಲರೂ"ಟ್ರಂಪಾಸುರ"ಎನ್ನದೆ "ಟ್ರಂಪೇಶ್ವರ" ಮತ್ತು"ತಂಪೇಶ್ವರ"ಎನ್ನುತ್ತಿದ್ದರು.

ಕೃತಯುಗದಲ್ಲಿತಾರಕಾಸುರ, ಮಹಿಷಾಸುರ, ರಕ್ತರುಧಿರಾಸುರ, ರಕ್ತಬೀಜಾಸುರ, ಶಕಟಾಸುರ, ಶುಂಭಾಸುರ, ಚಂಡಾಸುರ, ಚಂಡಮುಂಡಾಸುರರುಆರ್ಭಟ, ಅಟ್ಟಹಾಸವನ್ನು ಮಾಡಿಕೊಂಡಿದ್ದರೆಈಗ ಕೆಲವು ದೇಶಗಳು ಆ ಕೆಲಸವನ್ನು ಮಾಡುತ್ತಿವೆ.

ಈಗ ಅಮೇರಿಕಾವನ್ನು ಬರೀ ಅಮೇರಿಕಾ ಎಂದುಕರೆಯುವ ಹಾಗಿಲ್ಲ.

ಈಗ ಅಮೇರಿಕಾ, ಅಮೇರಿಕಾಸುರ.

ಈಗ ಇರಾನ್ ಬರೀಇರಾನ್‌ಅಲ್ಲ, ಅದುಇರಾನಾಸುರ.

ಈಗ ಇಸ್ರೇಲ್ ಬರೀಇಸ್ರೇಲ್‌ಅಲ್ಲ, ಅದೀಗ ಇಸ್ರೇಲಾಸುರ!!

ಮೊದಲು ವ್ಯಕ್ತಿಗತ ಮತ್ತು ವ್ಯಷ್ಟಿಗತವಾಗಿದ್ದ "ಅಸುರತ್ವ" ಈಗ ವಿಸ್ತಾರಗೊಂಡುಪ್ರಪಂಚವನ್ನುಆವರಿಸಿಕೊಂಡಿದೆ.ಕೆಲವೇಕೆಲವುಜನಗಳ ಯುದ್ಧದಾಹ, ಯುದ್ಧಮೋಹವದುಇಡೀ ಪ್ರಪಂಚವನ್ನುಯುದ್ಧದತೆಕ್ಕೆಗೆ ಎಳೆದುಕೊಳ್ಳಬೇಕೆನ್ನುತ್ತಿದೆ.ಬಹುಮುಖ್ಯವಾಗಿಯುದ್ಧವದುಅಮೇರಿಕಾ, ಇರಾನ್, ಇಸ್ರೇಲ್‌ಗಳ ಮಧ್ಯದಲ್ಲಿ ನಡೆದುಕೊಂಡಿದ್ದರೂಅದರದುಷ್ಪರಿಣಾಮಇಡೀ ಪ್ರಪಂಚದ ಮೇಲೆ ಆಗುತ್ತಿದೆ.

ಈಗಾಗಲೇ ನಮ್ಮ ಭಾರತಕೂಡಯುದ್ಧದದುಷ್ಪರಿಣಾಮಕ್ಕೆ ಒಳಗಾಗಿದೆ.



ನಮ್ಮದೇಶದಲ್ಲಿಅಡಿಗೆಇಂಧನ, ಪೆಟ್ರೋಲ್, ಡಿಜೈಲ್‌ಗಳ ಅಭಾವ ಶುರುವಿಟ್ಟುಕೊಂಡಿದೆ.

ಮೊದಲೊಂದು ಕಾಲವಿತ್ತು,

ಆಗ, "ಇಬ್ಬರ ಜಗಳ ಮೂರನೆಯವನಿಗೆಆಯ(ಲಾಭ)" ಎಂದು ಹೇಳುತ್ತಿದ್ದರು.

ಈಗ ಹಾಗಿಲ್ಲ, ಈಗ "ಇಬ್ಬರ ಜಗಳ ಮೂರನೆಯವನಿಗೆಗಾಯ" ಎಂದು ಹೇಳಬೇಕಾಗಿದೆ.

ನಾವೆಲ್ಲ ಸ್ವಾವಲಂಬನದ ಮಾತನಾಡಿಕೊಂಡಿದ್ದರೂ ಪ್ರಪಂಚವೀಗ ಪರಸ್ಪರಾವಲಂಬಿಯಾಗಿದೆ.

ಪ್ರತಿಯೊಂದುದೇಶವೂ ಪರಸ್ಪರ ಪದ, ಪದಾರ್ಥಗಳು ಮತ್ತು ವಸ್ತು, ಸಾಮಗ್ರಿಗಳ ಆದಾನ-ಪ್ರದಾನದ ವಿಷಯದಲ್ಲಿ ಪರಸ್ಪರಒಂದುದೇಶ ಇನ್ನೊಂದುದೇಶವನ್ನುಅವಲಂಬಿಸಿಕೊಂಡಿದೆ.

ಮಧ್ಯಪ್ರಾಚ್ಯ ದೇಶಗಳು ನಮಗೆ ಇಂಧನವನ್ನುಕೊಟ್ಟರೆ ನಾವು ಅವರಿಗೆಅಕ್ಕಿ ಬೇಳೆ ಬೆಲ್ಲ ಮತ್ತುಇತ್ಯಾದಿ ಆಹಾರ ಪದಾರ್ಥಗಳನ್ನು ಕೊಡುತ್ತೇವೆ.

ನಮ್ಮ ಗಾಡಿಗಳು ಓಡಬೇಕೆಂದರೆ ನಮಗೆ ಅವರಇಂಧನ ಬೇಕು.

ಅವರ ಹೊಟ್ಟೆಗೆಆಹಾರಬೇಕೆಂದರೆಅವರಿಗೆ ನಮ್ಮ ದಿನಸಿ, ದವಸ, ಧಾನ್ಯಗಳು ಬೇಕು.

ಕನ್ನಡದಲ್ಲಿಒಂದುಗಾದೆಮಾತಿದೆ, "ಕಲ್ಲಕ್ಕಕಡುಬುಕೊಟ್ಟರೆ ಮಲ್ಲಕ್ಕದೋಸೆ ಕೊಡುತ್ತಾಳೆ" ಎಂದು.

ಈಗ "ನೆರೆಮನೆಯವರ ಬೆಂಕಿ ನಮ್ಮನ್ನೇನು ಮಾಡೀತು?"ಎಂದು ಹೇಳುವ ಹಾಗಿಲ್ಲ.

ಈಗ "ನೆರೆಮನೆಯವರದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ" ಎಂದು ಹೇಳುವ ಹಾಗಿಲ್ಲ.ನೆರೆಮನೆಯವರ ಮನೆ ಹೊತ್ತಿಉರಿಯತ್ತಿದ್ದರೆ ನಮ್ಮ ಮನೆ ಅದೆಷ್ಟು ಸುರಕ್ಷಿತಎಂದು ನಾವು ಯೋಚಿಸಬೇಕಿದೆ.ನೆರೆಮನೆಯ ಬೆಂಕಿ ನಮ್ಮನ್ನೂ ಆವರಿಸಿಕೊಳ್ಳುತ್ತದೆ. ಅದು ನಮ್ಮ ಮೇಲೂ ಪರಿಣಾಮವನ್ನು ಬೀರುತ್ತದೆ.

ಸದ್ಯ ಈ ಯುದ್ಧವೇನಾದರೂ ಬೆಳೆದು ನಿಂತುಕೊಂಡರೆ ಮೂರನೆಯ ಮಹಾಯುದ್ಧಕ್ಕೆಆಹ್ವಾನ ನೀಡಿದ ಹಾಗೆ.ಅಕಸ್ಮಾತ್ ಮೂರನೆಯ ಮಹಾಯುದ್ಧವೇನಾದರೂ ನಡೆದರೆಜಗತ್ತಿನಸೊಂಟವೇ ಮುರಿದುಹೋಗುತ್ತದೆ.

ಸದ್ಯಏರಿ ಮೇಲೆ ಏರಿ ಮೇಲೆ ಕೆಳಗೆ ಹಾರಿಗುದ್ದಾಡಿಕೊಂಡಿರುವ ಅಮೇರಿಕಾಸುರ, ಇರಾಣಾಸುರ, ಇಸ್ರೇಲಾಸುರ ಮತ್ತುಇತ್ಯಾದಿ ಅಸುರರು ಬೇಗನೇ

"ಸಹನಾವವತು ಸಹ ನೌ ಭುನಕ್ತು ಸಹ ವೀರ್ಯಂಕರವಾವಹೈತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ" ಎಂದು ಶಾಂತಿಮಂತ್ರವನ್ನುಹೇಳಿಕೊಂಡು ಹೋಗದಿದ್ದರೆ ಪರಿಸ್ಥಿತಿ ತುಂಬ ಗಂಭೀರವಾಗುತ್ತದೆ.

ಅವರತಲೆಯ ಮೇಲೆ ಇವರು, ಇವರತಲೆಯ ಮೇಲೆ ಅವರು ಕೈ ಇಡುತ್ತಒಬ್ಬರನ್ನೊಬ್ಬರು ಸುಡುತ್ತ ಹೋದರೆಕೊನೆಯಲ್ಲಿಎಲ್ಲರೂಭಸ್ಮಾಸುರನಂತೆ ಭಸ್ಮವಾಗಿ ಹೋಗಬೇಕಾಗುತ್ತದೆ.

ಯುದ್ಧವೆಂದರೆ ನಮ್ಮೊಳಗಿನ ತೆವಲು, ತಿಕ್ಕಲುತನಗಳು ಬಹಿರಂಗ ಪ್ರದರ್ಶನ ಅಷ್ಟೇ!!

ಯುದ್ಧವದು ನಮ್ಮೊಳಗಿನ ರಾಗ, ದ್ವೇಷ, ಆಮಿಷ, ತಾಮಸಗಳ ನಗ್ನತಾಂಡವ ಅಷ್ಟೇ!!

ಯುದ್ಧದಿಂದಯಾರಿಗೆ ಒಳ್ಳೆಯದಾಗಿದೆ, ಹೇಳಿ?ಯುದ್ಧಯಾವತ್ತಿಗೂ ಸುಖಪ್ರದವಲ್ಲ.

ಯುದ್ಧ ಮಾಡುವುದರಿಂದ ನಾವು ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು.

ಯುದ್ಧದಲ್ಲಿ "ನಾವು ಗೆದ್ದೆವು" ಎಂದರೆಅದು ನಮ್ಮಅಹಂಕಾರಕ್ಕೆಇನ್ನಷ್ಟು ಮತ್ತಷ್ಟು ಮೇವು ಹಾಕಿದಂತೆ!!

ಯುದ್ಧಯಾವತ್ತೂ "ಬುದ್ಧ" ಅಲ್ಲ. ಬುದ್ಧನಿಗೆಯುದ್ಧ ಬೇಕಿಲ್ಲ.

ಯುದ್ಧವನ್ನು ಬುದ್ಧ ಬೆಂಬಲಿಸುವುದಿಲ್ಲ. ಬುದ್ಧನಿಗೆದ್ವಂದ್ವವೂ ಬೇಕಿಲ್ಲ. ಆತನಿಗೆದ್ವಂದ್ವಯುದ್ಧವೂ ಬೇಕಿಲ್ಲ.

ಬುದ್ಧ ನಮಗೆಲ್ಲ "ದಾನವನಾಗುವೆಯಾಇಲ್ಲ ಮಾನವನಾಗುವೆಯಾ?" ಎಂದು ಪ್ರಶ್ನಿಸುತ್ತಿದ್ದಾನೆ.

ಕವಿ ಮನಸ್ಸುಗಳು "ಏನಾದರೂ ಆಗು, ಮೊದಲು ಮಾನವನಾಗು" ಎಂದು ನಮಗೆ ತಿಳಿಹೇಳುತ್ತಾರೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ನಿಮಗೆ ಹೇಳಲೇಬೇಕು. ಕೊಲ್ಲುವಾಗಇರುವಖುಶಿ ಕೊಂದಾದ ಮೇಲೆ ಇರುವುದಿಲ್ಲ!!

ಮಹಾಭಾರತದಲ್ಲಿಕುರುಕ್ಷೇತ್ರಯುದ್ಧದ ನಂತರಕೃಷ್ಣನನ್ನು ಮೊದಲು ಮಾಡಿಕೊಂಡು ಪಾಂಡವರೆಲ್ಲರಲ್ಲೂಒಂದು ಬಹುದೊಡ್ಡ ಹತಾಶೆ ಆವರಿಸಿಕೊಳ್ಳುತ್ತದೆ.ಖುಶಿ ಇಲ್ಲದೆಅವರ ಮನಸ್ಸುಗಳೆಲ್ಲ ಖಾಲಿ, ಖಾಲಿಯಾಗಿದ್ದವು."ಇದೆಲ್ಲ ನಮಗೆ ಬೇಕಿತ್ತಾ?" ಎಂದುಅವರುಅದೆಷ್ಟು ಬಾರಿಅಂದುಕೊಂಡಿದ್ದಾರೋ?

ಯುದ್ಧದಲ್ಲಿತಾನುಕಟ್ಟಿದ ಮನೆಗೆ ತಾನೇ ಬೆಂಕಿ ಇಡಬೇಕಾಗುತ್ತದೆ.

ಯುದ್ಧದಲ್ಲಿತಾನುಕಟ್ಟಿದ ಕಟ್ಟಡಗಳು ಧರಾಶಾಯಿಯಾಗುವುದನ್ನು ತಾನೇಕಣ್ಣಾರೆನೋಡಬೇಕಾಗುತ್ತದೆ.

ನಮಗೆಲ್ಲಗೊತ್ತಿದೆ, "ಕಟ್ಟುವುದುಕಠಿಣ;ಕೆಡಿಸುವುದು ಸುಲಭ" ಎಂದು.

"ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಈ ಮಾತುಎಲ್ಲರಅನುಭವಕ್ಕೂ ಬಂದಿದೆ.

ಯುದ್ಧ ನಡೆದರೆಎಲ್ಲರ ಜೇಬುಗಳು ಖಾಲಿಯಾಗುತ್ತವೆ. ಅತೃಪ್ತಿ, ಅಂಸತುಷ್ಟಿಗಳು ತಾಂಡವವಾಡುತ್ತವೆ.

ಆದ್ದರಿಂದಲೇ, ನಮ್ಮ ಭಾರತಯುದ್ಧಪರವಾಗಿಇರದೆಯಾವಾಗಲೂ ಶಾಂತಿಪರವಾಗಿರುತ್ತದೆ.ನಮ್ಮದೇಶಕ್ಕೆ ಬೇಕಿರುವುದು ಶಾಂತಿ ಮತ್ತು ಸರ್ವಜನರ ಹಿತ.

ನಾವು ಭಾರತೀಯರುಯಾವತ್ತೂ "ಬಹುಜನ ಹಿತಾಯ ಮತ್ತು ಬಹುಜನ ಸುಖಾಯ"

ಅಂದರೆ"ಬಹುಜನರ ಸುಖಕ್ಕಾಗಿ" ಮತ್ತು"ಬಹುಜನರ ಹಿತಕ್ಕಾಗಿ"ಹಂಬಲಿಸಿಕೊಂಡಿರುತ್ತೇವೆ.

ನಮ್ಮದೇಶದ ವಿರೋಧಪಕ್ಷ"ಅದೇಕೆ ಹಾಗೆ ಆಡಿಕೊಂಡಿದೆ?"ಎಂದುಇಡೀದೇಶಯೋಚಿಸತೊಡಗಿದೆ.

ನಮ್ಮದೇಶದ ವಿರೋಧಪಕ್ಷ "ನಾನು ದೇಶದಜೊತೆಗೆಇಲ್ಲ" ಎಂಬುವುದನ್ನು ಮತ್ತೆ ಮತ್ತೆ ಸಾಬೀತುಪಡಿಸುತ್ತಿದೆ.ಅದೇಕೆಅದು ಮೋದಿವಿರೋಧಕ್ಕೆ"ದೇಶವಿರೋಧಿ" ದೀಕ್ಷೆಯನ್ನುಕೊಟ್ಟುಕೊಂಡಿದೆಯೋ?

ಅಷ್ಟು ಮಾತ್ರವಲ್ಲ, ಅದೀಗ ಯಾರ ಕಿವಿಮಾತಿಗೂಕಿವಿಯಾಗುವ ಪರಿಸ್ಥಿತಿಯಲ್ಲಿ ಇಲ್ಲ!!

ಪ್ರಪಂಚವೇ ಹೊತ್ತಿಉರಿಯುತ್ತಿರುವ ಈ ಸಮಯದಲ್ಲಿ ನಾವೆಲ್ಲರೂದೇಶದಜೊತೆಯಲ್ಲಿರಬೇಕು.

ದೇಶದತುಂಬೆಲ್ಲಒಂದೇಧ್ವನಿ ಮತ್ತುಒಂದೇ ಪ್ರತಿಧ್ವನಿಇರಬೇಕು.

ಕೊನೆಯಲ್ಲಿ, ನಾವು ಡಿವಿಜಿಯವರಇನ್ನೊಂದು ಮಾತನ್ನು ಜ್ಞಾಪಿಸಿಕೊಳ್ಳಬಯಸುತ್ತೇವೆ,

"ಗುದ್ದಲಿಯಿನಾದೀತೆ ಮಲೆ ಕಣಿವೆ ಸಮದ ನೆಲ?।
ಮದ್ದುತಡೆವುದೆ ಮುಪ್ಪು ಕಳ್ಳನವೊಲಮರೆ? ॥
ಯುದ್ಧತಾಪದೆ ಶಾಂತಿಶೀತಲತೆಯುದಿಸೀತೇ?।
ಸಿದ್ಧವಿರು ಸೈರಣೆಗೆ – ಮಂಕುತಿಮ್ಮ ॥

"ಯುದ್ಧದತಾಪದಿಂದ ಶಾಂತಿ ಮತ್ತು ಶೀತಲತೆಗಳ ಉದಯವಾಗುವುದಿಲ್ಲ.

ಅದಕ್ಕೋಸ್ಕರ ಏನೇ ಆದರೂ, ಏನೇ ಹೋದರೂಅದನ್ನು ಸಹಿಸಿಕೊಂಡು ಹೋಗುವ ಸಾಮರ್ಥ್ಯವನ್ನು ನಾವುಗಳು ಬೆಳೆಯಿಸಿಕೊಳ್ಳಬೇಕು" ಎಂದು.

ನಾವುಗಳು ಯುದ್ಧದ ವಿಷಯದಲ್ಲಿ ಕವಿಗಳು ಹೇಳಿದ ಮಾತಿಗೆಕಿವಿಯಾಗುವಾ ಮತ್ತು ಈ ವಿಷಯದಲ್ಲಿಅವರ ನಿಲುವಿಗೆ ನಾವುಗಳು ಬದ್ಧರಾಗಿರೋಣ.



ಡಾ.ಶ್ರೀಶಿವಾನಂದ ಶಿವಾಚಾರ್ಯ ಶ್ರೀಗಳು
ಸುಕ್ಷೇತ್ರ ಹಿರೇಮಠ, ತಪೋವನ, ತುಮಕೂರು

# ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆ:

## ಜನರ ಧ್ವನಿಗೆ ಸಂದ ಜಯ: ಡಾ.ಸಿ.ಎನ್.ಮಂಜುನಾಥ್ ಹರ್ಷ





ರಾಮನಗರ : ಒಡೆಯರ್ ಎಕ್ಸ್‌ಪ್ರೆಸ್ ರೈಲು ರಾಮನಗರದಲ್ಲಿ ನಿಲುಗಡೆ ನೀಡಬೇಕು ಎಂದು ಕೇಂದ್ರ ರೈಲ್ವೆ ಇಲಾಖೆ ಆದೇಶ ಹೊರಡಿಸಿರುವುದು ಅತ್ಯಂತ ಸಂತೋಷಕರ ಹಾಗೂ ಐತಿಹಾಸಿಕ ಬೆಳವಣಿಗೆಯಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಮನಗರ ಹಾಗೂ ಚನ್ನಪಟ್ಟಣ ಭಾಗದ ಜನರ ಬಹುಕಾಲದ ಬೇಡಿಕೆ ಇಂದು ಈಡೇರಿದಂತಾಗಿದೆ. ಈ ಭಾಗದ ಪ್ರಯಾಣಿಕರು, ವಿದ್ಯಾರ್ಥಿಗಳು, ಉದ್ಯೋಗಾರ್ಥಿಗಳು ಹಾಗೂ ವ್ಯಾಪಾರಸ್ಥರು ಎದುರಿಸುತ್ತಿದ್ದ ಸಂಚಾರದ ತೊಂದರೆಗಳನ್ನು ಮನಗಂಡು, ಈ ನಿಲುಗಡೆ ಅತ್ಯಂತ ಅಗತ್ಯವಾಗಿತ್ತು. ಜನರ ಈ ನ್ಯಾಯಸಮ್ಮತ ಬೇಡಿಕೆಯನ್ನು ಈಡೇರಿಸಲು ನಿರಂತರವಾಗಿ ಕೇಂದ್ರ ಸರ್ಕಾರದ ಗಮನವನ್ನು ಸೆಳೆದಿರುವುದಾಗಿ ತಿಳಿಸಿದ್ದಾರೆ.

ಈ ಸಂಬಂಧ ಹಲವು ಬಾರಿ ಪತ್ರಗಳ ಮೂಲಕ ಮನವಿ ಸಲ್ಲಿಸುವುದರ ಜೊತೆಗೆ, ಖುದ್ದಾಗಿ ಕೇಂದ್ರ ರೈಲ್ವೇ ಸಚಿವರಾದ ಅಶ್ವಿನಿ ವೈಷ್ಣವ್ ಮತ್ತು ರಾಜ್ಯ ರೈಲ್ವೇ ಖಾತೆ ಸಚಿವರಾದ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೆ. ರಾಮನಗರದಲ್ಲಿ ಈ ರೈಲು ನಿಲುಗಡೆಯ ಅಗತ್ಯತೆ ಮತ್ತು ಜನರಿಗೆ ಆಗುವ ಅನುಕೂಲಗಳನ್ನು ವಿವರವಾಗಿ ಮನವರಿಕೆ ಮಾಡಿಕೊಟ್ಟಿದ್ದು, ಈ ಪ್ರಯತ್ನಗಳಿಗೆ ಇಂದು ಸಕಾರಾತ್ಮಕ ಫಲ ದೊರೆತಿದೆ.

ನನ್ನ ಮನವಿಗೆ ಸ್ಪಂದಿಸಿ, ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ನಿಲುಗಡೆಗೆ ಅನುಮೋದನೆ ನೀಡಿದ ಕೇಂದ್ರ ರೈಲ್ವೇ ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಮತ್ತು ರಾಜ್ಯ ರೈಲ್ವೇ ಖಾತೆ ಸಚಿವರಾದ ವಿ.ಸೋಮಣ್ಣ ಹಾಗೂ ಈ ಕಾರ್ಯದಲ್ಲಿ ಕೈಜೋಡಿಸಿದ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ತಮ್ಮ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ನಿರ್ಧಾರದಿಂದ ರಾಮನಗರ ಮತ್ತು ಚನ್ನಪಟ್ಟಣ ಭಾಗದ ಜನತೆಗೆ ಬಹಳಷ್ಟು ಅನುಕೂಲವಾಗಲಿದೆ. ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳೊಂದಿಗೆ ಸಂಪರ್ಕ ಮತ್ತಷ್ಟು ಸುಗಮವಾಗುವುದರಿಂದ ಶಿಕ್ಷಣ, ಉದ್ಯೋಗ, ಆರೋಗ್ಯ ಸೇವೆಗಳು ಹಾಗೂ ವ್ಯಾಪಾರ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದೆ. ವಿಶೇಷವಾಗಿ ದೈನಂದಿನ ಪ್ರಯಾಣಿಕರಿಗೆ ಇದು ದೊಡ್ಡ ಮಟ್ಟದ ನೆರವಾಗಲಿದೆ.

ಮುಂದಿನ ದಿನಗಳಲ್ಲಿ ಕೂಡ ಜನರ ಅಗತ್ಯಗಳನ್ನು ಮನಗಂಡು, ಈ ಭಾಗದ ಅಭಿವೃದ್ಧಿಗೆ ಇನ್ನಷ್ಟು ಸೌಲಭ್ಯಗಳನ್ನು ತರಲು ನಾನು ಬದ್ಧನಾಗಿದ್ದೇನೆ ಎಂದು ತಮ್ಮ ಪ್ರಕಟಣೆಯಲ್ಲಿ ಸಂಸದರು ತಿಳಿಸಿದ್ದಾರೆ.

# ಮೇಕೆದಾಟು ಯೋಜನೆಗೆ ಸ್ಟಾಲಿನ್ ಒಪ್ಪಿಗೆ ತರಲಿ

## ಡಿಸಿಎಂ ಡಿ.ಕೆ.ಶಿವಕುಮಾರ್ ಗೆ ನಿಖಿಲ್ ಕುಮಾರಸ್ವಾಮಿ ಟಾಂಗ್



ರಾಮನಗರ: ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಕೊಡಿಸಲು ದೇವೇಗೌಡರು, ಕುಮಾರಸ್ವಾಮಿ ಬದ್ಧರಾಗಿದ್ದಾರೆ. ಆದ್ರೆ ತಮಿಳುನಾಡು ಸಿಎಂ ಸ್ಟಾಲಿನ್ ಅವರಿಂದ ಡಿಸಿಎಂ ಡಿಕೆಶಿ ಅವರು **NOC** ತೆಗೆದುಕೊಂಡು ಬರಲಿ. ಮರು ದಿನವೇ ಕೇಂದ್ರದ ಅನುಮತಿಗೆ ಹೆಚ್‌ಡಿಡಿ ಹಾಗೂ ಹೆಚ್‌ಡಿಕೆ ಹೋರಾಟ ಮಾಡುತ್ತಾರೆ ಎಂದು ಡಿಸಿಎಂ ವಿರುದ್ಧ ನಿಖಿಲ್ ಕುಮಾರಸ್ವಾಮಿ ಅವರು ಕಿಡಿಕಾರಿದರು.

ರಾಮನಗರದ ಚಿಕ್ಕೇಗೌಡನದೊಡ್ಡಿಯ ಮುನೇಶ್ವರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ನಿಖಿಲ್ ಕುಮಾರಸ್ವಾಮಿ ಮಾಧ್ಯಮದವರ ಜೊತೆ ಮಾತನಾಡಿದರು. ನೆನೆಗುದಿಗೆ ಬಿದ್ದ ಎತ್ತಿನ ಹೊಳೆ ಯೋಜನೆಗೆ ಮರುಜೀವ ಪಡೆಯಲು ದೇವೇಗೌಡರು ಸದನದಲ್ಲಿ ಅಂಗಲಾಚಿ ಬೇಡಿದ್ದಾರೆ. ದೇವೇಗೌಡರ ಹಿರಿತನಕ್ಕೆ ಕೇಂದ್ರ ನಾಯಕರು ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಕೊಡಿಸಲು ದೇವೇಗೌಡರು, ಕುಮಾರಸ್ವಾಮಿ ಬದ್ಧರಾಗಿದ್ದಾರೆ ಎಂದು ತಿಳಿಸಿದರು.

ಸಿದ್ದು ಯಾವ ರಾಜ್ಯದ ಸಿಎಂ: ಸಿದ್ದರಾಮಯ್ಯನವರು ಕೇರಳದ ಮುಖ್ಯಮಂತ್ರಿನಾ ಅಥವಾ ಕರ್ನಾಟಕ ಮುಖ್ಯಮಂತ್ರಿನಾ?. ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಅತಿವೃಷ್ಟಿಯಾಗಿತ್ತು. ಆಗ ರೈತರು ಪರಿಹಾರ ಕೇಳಿದ್ರು ಅವರ ಕೂಗು ಸಿದ್ದರಾಮಯ್ಯ ಅವರಿಗೆ ಕೇಳಲಿಲ್ಲ ಎಂದು ಸಿಎಂ ವಿರುದ್ಧ ನಿಖಿಲ್ ಕುಮಾರಸ್ವಾಮಿ ಅವರು ಗುಡುಗಿದರು.

ರಾಜ್ಯ ಸರ್ಕಾರ 10 ಕೋಟಿ ಅನುದಾನ ನೀಡಿದ ವಿಚಾರಕ್ಕೆ ಪ್ರತಿಕ್ರಿಯೆಸಿದರು. ಕೇರಳದಲ್ಲಿ ಭೂಕುಸಿತದಿಂದ ಜನರಿಗೆ ನೋವಾದ್ರೆ, ಅಲ್ಲಿನ ಸಿಎಂ ಪರಿಹಾರ ಘೋಷಣೆ ಮಾಡಬೇಕು. ಆದ್ರೆ ತಮ್ಮ ಕುರ್ಚಿ ಬಿಗಿ ಪಡಿಸಿಕೊಳ್ಳಲು, ಹೈಕಮಾಂಡ್ ವಿಶ್ವಾಸಗಳಿಸಲು ರಾಜ್ಯದ ತೆರಿಗೆ ಹಣ ವ್ಯರ್ಥ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು .

ಹೆಚ್ಚಿಕೆ ಪ್ರಚಾರ: ರಾಜ್ಯದಲ್ಲಿ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಜೆಡಿಎಸ್ ಅಂತರ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ನಿಖಿಲ್ ಎರಡೂ ಕ್ಷೇತ್ರದ ನಾಮಪತ್ರ ಸಲ್ಲಿಕೆ ವೇಳೆ ಜೆಡಿಎಸ್ ನಾಯಕರು ಭಾಗಿಯಾಗಿದ್ದರು. ದೆಹಲಿಯಲ್ಲಿ ಪಾರ್ಲಿಮೆಂಟ್ ನಡೆಯುತ್ತಿದೆ. ಎರಡೂ ಕ್ಷೇತ್ರಗಳಲ್ಲಿ ಕುಮಾರಸ್ವಾಮಿ ಸಹ ಪ್ರಚಾರ ಮಾಡುತ್ತಾರೆ ಜೆಡಿಎಸ್ ನಾಯಕರು ಕೂಡ ಹೋಗಿ ಪ್ರಚಾರ ಮಾಡಲಿದ್ದಾರೆ ಎಂದರು.

ಹೆಚ್.ಡಿ.ದೇವೇಗೌಡರನ್ನ ರಾಜ್ಯಸಭಾ ಸದಸ್ಯ ಸ್ಥಾನ ಧಕ್ಕೆ ಎನ್‌ಡಿಎ ನೇರ ಆಯ್ಕೆ ಮಾಡುವ ತಿರ್ಮಾನ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಅವರು ಇದು ಕೇಂದ್ರದ ನಾಯಕರಿಗೆ ಬಿಟ್ಟ ವಿಚಾರ. ನಮ್ಮ ಪಕ್ಷದಲ್ಲಿ ಯಾವುದೇ ಚರ್ಚೆ ನಡೆದಿಲ್ಲ. ಇನ್ನು ಜಿಟಿಡಿ ಜೆಡಿಎಸ್‌ನಿಂದ ಮತ್ತೆ ಸ್ಪರ್ಧೆ ಮಾಡುತ್ತೇನೆ ಎಂಬ ವಿಚಾರಕ್ಕೆ ಪ್ರತಿಕ್ರಿಯೆ ನೀಡದ ಅವರು ಕಳೆದ ಬಾರಿ ಜೆಡಿಎಸ್ ಚಿಹ್ನೆಯಲ್ಲಿ ನಿಂತು ಗೆದ್ದಿದ್ದಾರೆ. ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಏನು ಮಾಡಬೇಕು ಎಂಬುದಲ್ಲಿ ವರಿಷ್ಠರು ತಿರ್ಮಾನ ಮಾಡುತ್ತಾರೆ ಎಂದು ಹೇಳಿದರು

ಈ ಸಂದರ್ಭದಲ್ಲಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ದೊರೆಸ್ವಾಮಿ, ಕೃಷ್ಣಮೂರ್ತಿ (ಕಿಟ್ಟಿ), ಚಂದ್ರಣ್ಣ, ಸಂತೋಷ್, ಶ್ರೀಮೂರ್ತಿ, ಮೋಹನ್, ರವಿ ಸೇರಿದಂತೆ ಹಲವರಿದ್ದರು.

### ಎಸ್‌ಟಿಆರ್‌ಆರ್ ಭೂ ಪರಿಹಾರ ನಿಖಿಲ್ ಭರವಸೆ

ಸ್ಯಾಟಲೈಟ್ ಟೌನ್ ರಿಂಗ್ ರೋಡ್(ಎಸ್‌ಟಿಆರ್‌ಆರ್) ಯೋಜನೆಗೆ ಸಂಬಂಧಿಸಿದಂತೆ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ತಾಲ್ಲೂಕಿನ ಚಿಕ್ಕೇಗೌಡನದೊಡ್ಡಿ ಗ್ರಾಮಕ ಭೇಟಿ ನೀಡಿದ್ದ ವೇಳೆ ಸ್ಯಾಟಲೈಟ್ ಟೌನ್ ರಿಂಗ್ ರೋಡ್ ಯೋಜನೆಯ ರಸ್ತೆ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಭೂಮಿಯನ್ನು ಕಳೆದುಕೊಂಡ ರೈತರ ಅಹವಾಲುಗಳನ್ನು ನಿಖಿಲ್ ಆಲಿಸಿದರು. ಎಲ್ಲರ ಮನವಿಗೆ ಸ್ಪಂದಿಸುವ ಜೊತೆಗೆ 40 ಮಂದಿ ರೈತರ ನಿಯೋಗವನ್ನು ರಚಿಸಿದರು. ನಿಯೋಗದ ಸದಸ್ಯರನ್ನು ದೆಹಲಿಗೆ ಕರೆದುಕೊಂಡು ಹೋಗುವ ಜೊತೆಗೆ ಕೇಂದ್ರ ಸಚಿವರಾದ ಹೆಚ್.ಡಿ ಕುಮಾರಸ್ವಾಮಿ ಭೇಟಿ ಮಾಡಿಸಲಾಗುವುದು. ಅಲ್ಲದೇ ಭೂಸ್ವಾಧೀನದ ಪರಿಹಾರದ ಹಣವನ್ನ ಕೇಂದ್ರ ಸರ್ಕಾರದಿಂದ ಕೊಡಿಸಲು ಪ್ರಾಮಾಣಿಕವಾಗಿ ಯತ್ನಿಸುವುದಾಗಿ ತಿಳಿಸಿದರು.

ನಿಖಿಲ್ ಕುಮಾರಸ್ವಾಮಿ

# ಎಸ್‌ಆರ್ ಎಸ್ ಬೆಟ್ಟದಲ್ಲಿ ಜೂ.28 ಉಚಿತ ಸಾಮೂಹಿಕ ವಿವಾಹ

ರಾಮನಗರ : ಅವ್ವೇರಹಳ್ಳಿ ರೇವಣಸಿದ್ದೇಶ್ವರ ಬೆಟ್ಟದ ದಾಸೋಹ ಮಠದಲ್ಲಿ ಜೂನ್ 28 ರಂದು ಉಚಿತ ಸಾಮೂಹಿಕ ವಿವಾಹ ಮತ್ತು ಬಸವಲಿಂಗರಾಜ ಸ್ವಾಮೀಜಿಗಳವರ ಪ್ರಥಮ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ದಾಸೋಹ ಮಠದ ಹಿರಿಯಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿ ರೇವಣಸಿದ್ದೇಶ್ವರ ಬೆಟ್ಟದ ದಾಸೋಹ ಮಠದ ಆವರಣದಲ್ಲಿ ಮಂಗಳವಾರ ಸಾಮೂಹಿಕ ವಿವಾಹ ಬಸವಲಿಂಗರಾಜ ಸ್ವಾಮೀಜಿಗಳವರ ಪ್ರಥಮ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆ ಮತ್ತು ಪ್ರಚಾರ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

150 ವರ್ಷಗಳಿಗೂ ಹೆಚ್ಚಿನದಾಗಿ ದಾಸೋಹ ಮಠ ಕ್ಷೇತ್ರದಲ್ಲಿ ಸೇವಾಕಾರ್ಯ ನಡೆಸುತ್ತಾ ಬಂದಿದೆ. ಲಿಂಗೈಕ್ಯ ಬಸವಲಿಂಗಾಜ ಸ್ವಾಮೀಜಿಗಳು ಮಠದ ಅಭಿವೃದ್ಧಿಗೆ ಶ್ರಮಿಸಿ ಶ್ರೀಮಠದ ದಾಸೋಹ ಪರಂಪರೆ ಮುಂದುವರೆಸುತ್ತಾ ನಾಡಿನೆಲ್ಲೆಡೆ ಹೆಸರಾಗಿದ್ದರು. ಅವರ ಪ್ರಥಮ ವರ್ಷದ ಪುಣ್ಯಸ್ಮರಣೆಯನ್ನು ಸಾಮಾಜಿಕ ಸೇವಾ ಕಾರ್ಯಗಳೊಡನೆ ನೆರವೇರಿಸಲು ಶ್ರೀಮಠದ ಭಕ್ತವೃಂದ ತೀರ್ಮಾನಿಸಿರುವ ಕಾರಣ ಜೂನ್ 27 ಮತ್ತು 28 ರಂದು ಕಾರ್ಯಕ್ರಮ ನಡೆಯಲಿವೆ ಎಂದರು.

ಜೂ. 27 ರಂದು ಸಾಮೂಹಿಕ ಲಿಂಗಧೀಕ್ಷೆ ಕಾರ್ಯಕ್ರಮ ರಕ್ತದಾನ ಶಿಬಿರ, ಆರೋಗ್ಯ ಶಿಬಿರ ನಡೆಯಲಿದೆ. ಜೂ. 28ರಂದು ಉಚಿತ ಸಾಮೂಹಿಕ ವಿವಾಹ ಮತ್ತು ಧಾರ್ಮಿಕ ಸಮಾರಂಭ ನಡೆಯಲಿದೆ. ಕಾರ್ಯಕ್ರಮದಲ್ಲಿ ಬಾಳೇಹೊನ್ನೂರು 1008 ಜಗದ್ಗುರು ಶ್ರೀ ಶ್ರೀ ಪ್ರಸನ್ನ ರೇಣುಕ ವೀರ ಸೋಮೇಶ್ವರ ಭಗತ್ಪಾದರು, ಉಜ್ಜಯಿನಿ ಪೀಠದ 1008 ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಸುತ್ತೂರು ಜಗದ್ದುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿಗಳು ಸೇರಿದಂತೆ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು, ನಾಡಿನ ಹರಗುರು ಚರಮೂರ್ತಿಗಳು ರಾಜಕೀಯ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ಎಸ್. ಯೋಗಾನಂದ್ ಮಾತನಾಡಿ ಬಸವಲಿಂಗರಾಜ ಸ್ವಾಮೀಜಿಗಳ ಪ್ರಥಮ ವರ್ಷದ ಸಂಸ್ಮರಣೋತ್ಸವವನ್ನು ಅರ್ಥಪೂರ್ಣವಾಗಿ ಸಾಮಾಜಿಕ ಸೇವೆ ಮೂಲಕ ಆಚರಿಸಲು ಭಕ್ತವೃಂದ ತೀರ್ಮಾನಿಸಿದೆ. ಅದರ ಅಂಗವಾಗಿ ಶ್ರೀ ಮಠದ ಆವರಣದಲ್ಲಿ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ನೆರವೇರಲಿದ್ದು ವಧೂ–ವರರಿಗೆ ಶ್ರೀಮಠದಿಂದ ಚಿನ್ನದ ಮಂಗಳಸೂತ್ರ, ಬೆಳ್ಳಿ ಕಾಲುಂಗುರ, ಸೀರೆ, ಶರ್ಟ್, ಪಂಚೆ, ಟವಲ್ ನೀಡಲಾಗುತ್ತದೆ. ಜೂನ್ 10ನೇ ತಾರೀಖಿನೊಳಗೆ ಸೂಕ್ತ ದಾಖಲಾತಿಗಳೊಡನೆ ಶ್ರೀಮಠದಲ್ಲಿ ಹೆಸರನ್ನು ನೊಂದಾಯಿಸಿಕೊಳ್ಳಬೇಕು ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಅಧ್ಯಕ್ಷ ಪೋಲೀಸ್ ಶಂಕರಪ್ಪ, ದಾಸೋಹಮಠ ಅಭಿವೃದ್ಧಿ ಸೇವಾ ಟ್ರಸ್ಟ್ ಅಧ್ಯಕ್ಷ ರಾಜಣ್ಣ, ಮುಖಂಡ ಅವ್ವೇರಹಳ್ಳಿ ಶಿವಲಿಂಗಯ್ಯ ಕನಕಪುರ ಕೈಲಾಶ್ ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ರವೀಶ್, ಕೈಲಾಂಚ ಗ್ರಾಪಂ ಮಾಜಿ ಅಧ್ಯಕ್ಷ ಆರ್. ಪಾಂಡುರಂಗ, ಜಿಲ್ಲಾ ಕಾನಿಪ ಅಧ್ಯಕ್ಷ ಶಿವಲಿಂಗಯ್ಯ ವಿಭೂತಿಕೆರೆ, ಕರುನಾಡಸೇನೆ ಐಜೂರು ಜಗದೀಶ್, ಮುಖಂಡರುಗಳಾದ ಜನತಾ ನಾಗೇಶ್, ಅವ್ವೇರಹಳ್ಳಿ ತಮ್ಮಣ್ಣ, ನಂದೀಶ್‌ಗೌಡ, ಮಹದೇವಯ್ಯ, ಬಿಡದಿ ಶಿವಸ್ವಾಮಿ, ನೆಲಮಲೆ ಗಂಗಾಧರ್, ರಾಮಣ್ಣ, ದೇವರದೊಡ್ಡಿ ಗೋಪಾಲನಾಯ್ಕ್, ನಾಯಂಡಳ್ಳಿ ಷಡಕ್ಷರಿ, ರಾ.ಶಿ. ಬಸವರಾಜು, ಯತೀಶ್, ಕೋಟಹಳ್ಳಿ ರವಿ, ಮಹದೇವಪ್ರಸಾದ್, ಕುಮಾರ್, ಸೋಮಶೇಖರ್, ಚಂದ್ರಶೇಖರ್, ಮಹದೇವಯ್ಯ, ರಾಘವೇಂದ್ರ, ಚಿಕ್ಕಹೊನ್ನಯ್ಯ, ಗಂಗಮಲ್ಲಯ, ಶಂಕರ್, ರೇಣುಕಪ್ಪ ಮತ್ತಿತರರು ಇದ್ದರು.

# ಚಿಕ್ಕಬಿದರೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ.

ತಿಪಟೂರು : ತಾಲ್ಲೂಕಿನ ಕಸಬಾ ಹೋಬಳಿಯ ಚಿಕ್ಕಬಿದರೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಪುಟ್ಟಸ್ವಾಮಿಗೌಡ ಸಿ.ಎಚ್ ಹಾಗೂ ಉಪಾಧ್ಯಕ್ಷರಾಗಿ ಲೀಲಾವತಿ ವೈ.ಎಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ನಿರ್ದೇಶಕರಾಗಿ ಶಂಕರ್.ಸಿ.ಡಿ, ರೇಣುಕಮ್ಮ, ಸತೀಶ್‌ರಾವ್.ಸಿ.ಜಿ, ಬಸವರಾಜು.ಸಿ.ಯು, ಸತೀಶ್.ಸಿ.ಎನ್, ಗಂಗಾಧರ್.ಸಿ.ಆರ್, ಜಯಣ್ಣ.ಸಿ.ಜೆ, ರಂಗಸ್ವಾಮಿ, ನಾಗರಾಜು.ಸಿ.ಎಸ್, ಯೋಗೀಶ್.ಸಿ ಅವಿರೋಧವಾಗಿ ಆಯ್ಕೆಯಾದರು. ಸಂದರ್ಭದಲ್ಲಿ ಡೈರಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಸಿ.ವೀರೇಶ್, ಸಿಬ್ಬಂದಿ ಸಿ.ಆರ್.ರಮೇಶ್ ಹಾಗೂ ಚುನಾವಣಾಧಿಕಾರಿ ಶಂಶಾದ ಬೇಗ್ ಹಾಜರಿದ್ದರು.



ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# 12 ನೇ ಶತಮಾನದಲ್ಲಿ ಹೆಣ್ಣಿನ ತಾರತಮ್ಯ ನೆನಪಿಸುವ 'ಹೆಣ್ಣು ನಮ್ಮ ಸಂಸ್ಕೃತಿಯ ಕಣ್ಣು' ಕಾರ್ಯಕ್ರಮ

ತುಮಕೂರು: ನಗರದ ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇ ನಲ್ಲಿ ಮಹಿಳಾ ಸಬಲೀಕರಣ ಘಟಕ, ಲೈಂಗಿಕ ಕಿರುಕುಳ ವಿರೋಧಿ ಘಟಕ ಮತ್ತು ವಿಜ್ಞಾನ ಕ್ಲಬ್ ವತಿಯಿಂದ ಐಕ್ಯೂಎಸಿ ಸಹಯೋಗದಲ್ಲಿ **"Give to Gain"** ಎಂಬ ವಿಷಯದ ಮೇಲೆ ತಜ್ಞರ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ಕಾರ್ಯಕ್ರಮವನ್ನು ಅಂತರರಾಷ್ಟ್ರೀಯ ಮಹಿಳಾ ದಿನ ಮತ್ತು ವಿಜ್ಞಾನ ದಿನದ ಅಂಗವಾಗಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಮುಖ್ಯಅಥಿತಿಗಳಾಗಿರುವ ಸಿದ್ದಗಂಗಾ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪ್ರಾಂಶುಪಾಲರಾದ ಡಾ.ಶಾಲಿನಿ. ಎಂ ದೀಪಾ ಬೆಳಗುಸುವುದರ ಮೂಲಕ ಮತ್ತು ಸಾವಿತ್ರಿ ಬಾಯಿ ಮತ್ತು ಸರ್. ಎಂ. ವಿಶ್ವೇಶ್ವರಯ್ಯ ರವರ ಭಾವಚಿತ್ರಕ್ಕೆ ಪುಷ್ಪ ಹಾಕುವುದರ ಮೂಲಕ ಉದ್ಘಾಟಿಸಲಾಯಿತು.

'ಹೆಣ್ಣು ನಮ್ಮ ಸಂಸ್ಕೃತಿಯ ಕಣ್ಣು' 12 ನೇ ಶತಮಾನದಲ್ಲಿ ಹೆಣ್ಣಿನ ತಾರತಮ್ಯ ಇದ್ದರು ಕೂಡ ಅನೇಕ ವಚನಕಾರರು, ಸ್ವತಂತ್ರ ಹೋರಾಟಗಾರರ ಸಾಧನೆಗಳನ್ನು ನೆನಸಿಕೊಂಡು, ಹಾಗೇ ಇಂದಿನ ಹೆಣ್ಣು ಮಕ್ಕಳ ಮನಸ್ಥಿತಿಗಳು (ತೊಂದರೆಗಳು) ಪುರುಷರು ಅರ್ಥೈಸಿಕೊಳ್ಳಬೇಕು, ಮತ್ತು ಪ್ರತಿ ವರ್ಷವೂ ದೇಶ–ರಾಜ್ಯದಲ್ಲಿ ಇನ್ನು ಹೆಚ್ಚಿನ ಸಂಭ್ರಮದಲ್ಲಿ ಆಚರಿಸಬೇಕೆಂದು ತಿಳಿಸುತ್ತಾ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಮಾತನಾಡಿದರು.

ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿರುವ ಹನುಮಂತರಾಯಪ್ಪ ರವರು ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದಂತೆ ಸಿವಿ ರಾಮನ್ ಹಾಗೂ ಹಲವಾರು ವಿಜ್ಞಾನಿಗಳನ್ನು ನೆನೆಸಿಕೊಳ್ಳುತ್ತಾ ಒಂದು ಮನೆಯಲ್ಲಿ ತಾಯಿ ಶಿಸ್ತಿನಲ್ಲಿದ್ದರೆ ತನ್ನ ಮಕ್ಕಳು ಸಹ ಶಿಸ್ತನ್ನು ಪಾಲಿಸುತ್ತಾರೆ ಎಂದು ಮಾತನಾಡಿದರು



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೇಮಲತಾ ಪಿ ಅವರು ತಮ್ಮ ತಾಯಿ ಅಕ್ಕ–ತಂಗಿ ಸ್ನೇಹಿತೆ ಆಗಿರುವ ಹೆಣ್ಣು ಮಕ್ಕಳಿಗೆ ಗೌರವವನ್ನು ನೀಡುವುದರ ಜೊತೆಗೆ ವಿಜ್ಞಾನ ತಂತ್ರಜ್ಞಾನಗಳಲ್ಲಿ ಯಾವ ರೀತಿಯಲ್ಲಿ ಮಹಿಳೆಯರು ಮುಂದುವರಿದಿದ್ದಾರೆ ಎಂಬುದನ್ನು ತಿಳಿದು ನಾವು ಸಹ ಉತ್ತಮ ಮಾರ್ಗಗಳಲ್ಲಿ ಹೆಸರು ಮಾಡುವ ಕಡೆ ಗಮನಹರಿಸಬೇಕೆಂದು ವಿದ್ಯಾರ್ಥಿನಿಯರಿಗೆ ತಿಳಿಸಿದರು.

ಗೌರವ ಅತಿಥಿಯಾಗಿ ಶ್ರೀ ಕೆ.ಹೆಚ್. ಖಲಂದರ್ ಪಾಶಾ, ಸಹಾಯಕ ಆಡಳಿತಾಧಿಕಾರಿ, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ತುಮಕೂರು ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ ಘಟಕದ ಸಂಯೋಜಕಿ ಶ್ರೀಮತಿ ಆಶಾ ಎಚ್.ಎಲ್, ವಿಜ್ಞಾನ ಕ್ಲಬ್ ಸಂಯೋಜಕ ಶ್ರೀ ಹನುಮಂತರಾಯಪ್ಪ ಎಚ್, ಮತ್ತು ಐಕ್ಯೂಎಸಿ ಸಂಯೋಜಕ ಶ್ರೀ ಸಯ್ಯದ್ ಬಾಬು ಎಚ್.ಬಿ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

### ಸಿದ್ದಾರ್ಥ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ

# 2 ದಿನಗಳ ರಿದಂಬರ ಸಾಂಸ್ಕೃತಿಕ ಉತ್ಸವ




ತುಮಕೂರು: ದಕ್ಷಿಣ ಭಾರತದ ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಸ್ಥಾನಮಾನ ಹೊಂದಿರುವ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಸಿದ್ಧಾರ್ಥ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾರ್ಚ್ ತಿಂಗಳ 27, 28ರಂದು ಸಂಜೆ 6ಗಂಟೆಗೆ ಅಂತರ್ ಕಾಲೇಜುಗಳ ರಿದಂಬರ ವಿಶೇಷ ಸಾಂಸ್ಕೃತಿಕ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿದ್ಧಾರ್ಥ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಲ್. ಸಂಜೀವ್ ಕುಮಾರ್ ತಿಳಿಸಿದರು.

ಸುಂದರ ಮುಸ್ಸಂಜೆಯ ಈ ಸಾಂಸ್ಕೃತಿಕ ಉತ್ಸವದ ಅಧ್ಯಕ್ಷತೆಯನ್ನ ಕರ್ನಾಟಕ ಸರ್ಕಾರದ ಗೃಹ ಮಂತ್ರಿ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾದ ಸಾಹೇ ವಿವಿ ಕುಲಾಧಿಪತಿಗಳಾದ ಸವ್ಯಸಾಚಿ ಡಾ. ಜಿ ಪರಮೇಶ್ವರ್ ಅವರು ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಬಹುಭಾಷ ನಟ ರಿಶಿ ನಾಗರಾಜು, ಹಾಯ್ ಬೆಂಗಳೂರು ಪತ್ರಿಕೆಯ ಸಂಪಾದಕರಾದ ಭಾವನ ಬೆಳಗೆರೆ, ಮಿಮಿಕ್ರಿ ಆರ್ಟಿಸ್ಟ್ ನಿರ್ದೇಶಕ ಸಾಗರ್ ತುರುವೇಕೆರೆ , ಕಾಮಿಡಿ ಚಿತ್ರನಟ ಟಿ.ಆರ್ ಸಂಜು ಸಾಹೇ ವಿವಿ ಕುಲಾಧಿಪತಿಗಳ ಸಲಹೆಗಾರರಾದ ಡಾ. ವಿವೇಕ್ ವೀರಯ್ಯ ಹಾಗೂ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ,

ರಾಜ್ಯದ ಸುಮಾರು ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿಗಳು ಈ ಸಾಂಸ್ಕೃತಿಕ ಉತ್ಸವದಲ್ಲಿ ಭಾಗಿಯಾಗಿ ವಿವಿಧ ಸಾಂಸ್ಕೃತಿಕ ಪ್ರದರ್ಶನಗಳನ್ನ ನೀಡಲಿದ್ದು ಈ ಉತ್ಸವದಲ್ಲಿ ವಿಶೇಷವಾಗಿ ಪಾಯರ್ ಚಿತ್ರದ ಚಿತ್ರತಂಡ ಉತ್ಸವಕ್ಕೆ ಮೆರುಗು ನೀಡಲಿದೆ ಎಂದರು.

ಇದೇ ವೇಳೆ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಹಳೆವಿದ್ಯಾರ್ಥಿಗಳ ಕೂಟವನ್ನು ಏರ್ಪಡಿಸಲಾಗಿದೆ. ಹಳೇ ವಿದ್ಯಾರ್ಥಿಗಳೊಂದಿಗೆ ಸಾಹೇ ವಿ.ವಿಯ ಕುಲಾಧಿಪತಿಗಳಾದ ಡಾ.ಜಿ.ಪರಮೇಶ್ವರ್ ಅವರು ಚರ್ಚಿಸಲಿದ್ದಾರೆ ಎಂದು ಡಾ. ಎಲ್ ಸಂಜೀವ್ ಕುಮಾರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರ್ಥಿಕ ಕಾಯ್ದೆಯನ್ನು ಹಿಂಪಡೆಯಬೇಕೆಂದು ರಾಜ್ಯ ಸರ್ಕಾರಿ ನಿವೃತ್ತ ನೌಕರರು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ

ಕೊರಟಗೆರೆ ;– ಅಖಿಲ ಭಾರತ ನಿವೃತ್ತ ಪಿಂಚಣಿದಾರರಿಗೆ ಹಾಗೂ ರಾಜ್ಯ ಸರ್ಕಾರಿ ನಿವೃತ್ತ ಪಿಂಚಣಿದಾರರಿಗೆ ಕೇಂದ್ರ ಸರ್ಕಾರ 2025 ರ ಆರ್ಥಿಕ ಕಾಯ್ದೆಯನ್ನು ಹಿಂಪಡೆಯ ಬೇಕೆಂದು ಹಾಗೂ ರಾಜ್ಯ ಸರ್ಕಾರ 7ನೇ ವೇತನ ಆಯೋಗದ ಶಿಫಾರಸ್ಸಗಳನ್ನು ಕೊಡಲೆ ಜಾರಿಗೊಳಿಸುಂತೆ ಒತ್ತಾಯಿಸಿ ರಾಜ್ಯ ಸರ್ಕಾರಿ ನಿವೃತ್ತ ನೌಕರರು ಕಪ್ಪು ಪಟ್ಟಿ ಧರಿಸಿ ಪ್ರತಿ ಭಟನೆ ನಡೆಸಿ ಪ್ರಭಾರ ತಾಶೀಲ್ದಾರ್ ಎ.ಜೆ. ರಾಜು ರವರಿಗೆ ಮನವಿ ಸಲ್ಲಿಸಿದರು.

ಮನವಿ ಪತ್ರ ಸಲ್ಲಿಸಿ ನಂತರ ಮಾತನಾಡಿದ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಹನುಮಂತರಾಯಪ್ಪ ಅಖಿಲ ಭಾರತ ನಿವೃತ್ತ ಪಿಂಚಣಿದರರಿಗೆ, ರಾಜ್ಯ ಸರ್ಕಾರಿ ನಿವೃತ್ತ ಪಿಂಚಣಿದಾರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಕೇಂದ್ರ ಸರ್ಕಾರ 2025ರ ಆರ್ಥಿಕ ಕಾಯ್ದೆ ಯನ್ನು ಜಾರಿ ಗೊಳಿಸಲು ಕೇಂದ್ರ ಸರ್ಕಾರದ ಆರ್ಥಿಕ ಸಚಿವರಾದ ನಿರ್ಮಲ ಸೀತಾರಾಮನ್ ಮುಂದಿನ ದಿನಗಳಲ್ಲಿ ನಿವೃತ್ತ ವೇತನ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ 2 ತುಟ್ಟಿ ಭತ್ಯೆಯನ್ನು ನೀಡಲು ಸಾಧ್ಯವಾಗುವುದಿಲ್ಲ ಎಂಬುದರ ಬಗ್ಗೆ ಚರ್ಚೆ ಮಾಡುತ್ತಿರುವುದು ಖಂಡನೀಯವಾಗಿದ್ದು ಚರ್ಚೆ ಸ್ಥಗಿತಗೊಳಿಸಿ ನಿವೃತ್ತಿ ನೌಕರರಿಗೆ ನೀಡುತ್ತಿರುವ ಸವಲತ್ತುಗಳನ್ನು ಮುಂದುವರೆ ಸುವಂತೆ ಹಾಗೂ ರಾಜ್ಯ ಸರ್ಕಾರ 7ನೇ ವೇತನ ಆಯೋಗದ ಶಿಫಾರಸ್ತುಗಳನ್ನು ಸರ್ಕಾರಿ ನಿವೃತ್ತ ನೌಕರರಿಗೆ ಮತ್ತು ಕುಟುಂಬ ಪಿಂಚಣಿದಾರರಿಗೆ ಅನ್ವಯಿಸುವಂತೆ ಕೂಡಲೆ ಜಾರಿಗೊಳಿಸಬೇಕೆಂದು ಒತ್ತಾಯಿಸಿ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಕೊರಟಗೆರೆ ತಾಲೂಕು ಸಂಘದ ಪಧಾದಿಕಾರಿಗಳು ಮತ್ತು ಸದಸ್ಯರು ಕಪ್ಪು ಪಟ್ಟಿ ಧರಿಸಿ ತಾಲೂಕು ಕಛೇರಿ ಮುಂದೆ ಸಾಂಕೇತಿಕವಾಗಿ ಪ್ರತಿಭಟನೆ ನಡೆಸುತ್ತಿದ್ದು ತಮ್ಮ ಮನವಿಗೆ ಸರ್ಕಾರ ಸ್ಪಂದಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರಹೋರಾಟ ಮಾಡುವುದಾಗಿ ತಿಳಿಸಿದರು.



ಪ್ರತಿಭಟನೆಯಲ್ಲಿ ತಾಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಹನುಮಂತರಾಯಪ್ಪ, ಉಪಾಧ್ಯಕ್ಷ ಪಿ.ವಿ.ರುದ್ರಯ್ಯ, ಪ್ರಧಾನಾ ಕಾರ್ಯದರ್ಶಿ ವಿ.ಮಲ್ಲೇಶಯ್ಯ, ಖಜಾಂಚಿ ಎಂ.ಆರ್.ಬೊಮ್ಮಣ್ಣ, ಸದಸ್ಯರಾದ ನಾರಾಯಣಪ್ಪ, ಚನ್ನಬಸವರಾಧ್ಯ, ನಂದೀಶ್, ಕ್ಯಾತಯ್ಯ, ಪಿ.ಎಸ್.ಗಂಗಮ್ಮ, ಟಿ,ಕೆ.ರಂಗಮ್ಮ ಸೇರಿದಂತೆ ತಾಲುಕಿನ ಹೋಬಳಿ ಸಂಘಗಳ ಪಧಾದಿಕಾರಿಗಳು ಉಪಸ್ಥಿತರಿದ್ದರು.

# ತಿಗಳರ ಸಮುದಾಯದ ಸಮುದಾಯ ಭವನ ನಿರ್ಮಾಣಕ್ಕೆ ಮನವಿ ಪತ್ರ

ಕೊರಟಗೆರೆ ;– ತಾಲೂಕಿನಲ್ಲಿ ಅತಿ ಕಮ್ಮಿ ಜನ ಸಂಖ್ಯೆ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ತಿಗಳರ ಸಮುದಾಯದ ಸಮುದಾಯ ಭವನ ನಿರ್ಮಾಣಕ್ಕೆ ಮತ್ತು ಸಮುದಾಯದ ವಿಧ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ದಿಗೆ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಸರ್ಕಾರ ನಿವೇಶಣ ನೀವೇಶಣ ನೀಡಬೇಕಂದು ತಾಲೂಕು ತಿಗಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಟಿ.ಮಂಜುನಾಥ್ ಪ್ರಭಾರಿ ತಾಶೀಲ್ದಾರ್ ಎ.ಜೆ. ರಾಜುರವರಿಗೆ ಮನವಿ ಪತ್ರ ಸಲ್ಲಿಸಿದರು.

ಅವರು ಕೊರಟಗೆರೆ ಪಟ್ಟಣದ ತಾಲೂಕು ಕಛೇರಿ ಸಭಾಂಗಣದಲ್ಲಿ ಪ್ರಭಾರಿ ತಾಶೀಲ್ದಾರ್ ಎ.ಜೆ.ರಾಜು ಅಧ್ಯಕ್ಷತೆಯಲ್ಲಿ ಏರ್ಪಟಿಸಿದ್ದ ಶ್ರೀ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಬೆಯಲ್ಲಿ ಕೊರಟಗೆರೆ ತಾಲೂಕು ತಿಗಳರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳೊಂದಿಗೆ ಭಾಗವಹಿಸಿ ಮನವಿ ಪತ್ರ ಸಲ್ಲಿಸಿ ತಾಲೂಕಿನಲ್ಲಿ ಅಲ್ಪಸಂಖ್ಯಾತ ಸಮುದಾಯವಾಗಿರುವ ಆರ್ಥಿಕವಾಗಿ ಹಿಂದುಳಿದಿರುವ ತಿಗಳ ಸಮುದಾಯದ ಸಂಘಟನೆಗೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ದಿಗೆ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ತಾಲೂಕಿನ ಜಂಪೇನಹಳ್ಳಿ ಸರ್ವೇ ನಂ 17 ರಲ್ಲಿ 20 ಗುಂಟೆ ಜಮೀನು ಸರ್ಕಾರ ದಿಂದ ಮೂಂಜೂರು ಮಾಡಿಸಿಕೊಡುವಂತೆ ಮನವಿ ಮಾಡಿದರು ನಂತರ ಸಭೆಯಲ್ಲಿ ತಾಲೂಕು ಆಡಳಿತ ವತಿಯಿಂದ ಮಾ.28 ರಂದು ಭಾನುವಾರ ಬೆಳ್ಳಿಗೆ 11 ಗಂಟೆಗೆ ತಾಲೂಕು ಕಛೇರಿ ಸಭಾಂಗಣದಲ್ಲಿ ಶ್ರೀ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿ ಕಾರ್ಯಕ್ರಮ ಆಚರಣೆ ಮಾಡುವುದಾಗಿ ತಿರ್ಮಾನಿಸಲಾಯಿತು.

ಪೂರ್ವ ಭಾವಿ ಸಭೆಯಲ್ಲಿ ಪ್ರಭಾರ ತಹಶೀಲ್ದಾರ್ ಎ.ಜೆ. ರಾಜು, ಚುನಾವಣಾ ಶಿರಸ್ತೇದಾರ್ ಮಂಜುನಾಥ್, ನಕುಲ್, ಸಮಾಜ ಕಲ್ಯಾಣಾಧಿಕಾರಿ ಯಮುನಾ, ತಾಲೂಕು ತಿಗಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಟಿ.ಮಂಜುನಾಥ್, ಕಾರ್ಯದರ್ಶಿ ಜಿ.ಟಿ.ರಂಗಣ್ಣ, ನಿದೇಶಕರುಗಳಾದ ಶ್ರೀರಂಗಯ್ಯ, ಬಾಲರಾಜು, ಚಿಕ್ಕತಿಮ್ಮಯ್ಯ, ಎಸ್.ಡಿ.ವೆಂಕಟೇಶ್, ಜಿ.ರಾಮಯ್ಯ, ರಾಮಣ್ಣ, ಪ್ರಕಾಶ್, ಎಸ್.ಬಿ.ಲಿಂಗಪ್ಪ ಸೇರಿದಂತೆ ಇನ್ನಿತರರು ಉಪಸ್ಥಿರಿದ್ದರು.

